2016 ಕ.ತೀ.ವ. 1051

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಕೃಷ್ಣಗೌಡ –ವಿರುದ್ಧ– ಬಸಪ್ಪ *

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಎದುರುದಾರರು ಮೇಲ್ಮನವಿದಾರರ ವಿರುದ್ಧ ಹೂಡಿದ ದಾವೆಯನ್ನು ಅಧಿವಿಚಾರಣಾ ನ್ಯಾಯಾಲಯವು ಪುರಸ್ಕರಿಸಿದ ಕ್ರಮವನ್ನು ಪ್ರಶ್ನಿಸಿ ಮೇಲ್ಮನವಿದಾರರು ಮೊದಲನೇ ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಮೇಲ್ಮನವಿ ವಜಾಗೊಳಿಸಲ್ಪಡುತ್ತದೆ. ಮೊದಲನೇ ಮೇಲ್ಮನವಿ ನ್ಯಾಯಾಲಯದ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ ಸದರಿ ನಿಯತ ಎರಡನೇ ಮೇಲ್ಮನವಿ.

ಮೇಲ್ಮನವಿದಾರರು ದಾವಾ ಸ್ವತ್ತಿನ ವ್ಯತಿರಿಕ್ತ ಅನುಭವವನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ಕೆಳ ನ್ಯಾಯಾಲಯಗಳೆರಡೂ ಎದುರುದಾರರು ದಾವಾ ಸ್ವತ್ತಿನ ಮಾಲೀಕರೆಂದು ನಿರ್ಣಯವನ್ನು ನೀಡಿರುತ್ತದೆ. ಈ ಕಾರಣದಿಂದ ಸದರಿ ಮೇಲ್ಮನವಿಯಲ್ಲಿ ಮುಖ್ಯವಾದ ಕಾನೂನು ಪ್ರಶ್ನೆಯು ಉದ್ಭವಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.

---

*ನಿಯತ ಎರಡನೇ ಮೇಲ್ಮನವಿ ಸಂ: 5593/2012(ಪಿಓಎಸ್),
ದಿನಾಂಕ: 8ನೇ ಅಕ್ಟೋಬರ್, 2015

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. (2007)6 ಎಸ್‌ಸಿಸಿ 59*<br>*ಪಿ.ಟಿ. ಮುನಿಚಿಕ್ಕಣ್ಣ ರೆಡ್ಡಿ –ವಿರುದ್ಧ–*<br>*ರೇವಮ್ಮ ಮತ್ತು ಇತರರು* | *(ಉಲ್ಲೇ) 27* |
| *2. (2011) 10 ಎಸ್‌ಸಿಸಿ 404*<br>*ಹರಿಯಾಣ ರಾಜ್ಯ ಸರ್ಕಾರ –ವಿರುದ್ಧ–*<br>*ಮುಖೇಶ್ ಕುಮಾರ್ ಮತ್ತು ಇತರರು* | *(ಉಲ್ಲೇ) 29* |

ಮೇಲ್ಮನವಿದಾರರ ಪರ: ಶ್ರೀ ಬಿ.ಡಿ. ಹೆಗಡೆ ಮತ್ತು ಶ್ರೀ ಎಸ್.ಬಿ. ಪಾಟೀಲ್, ನ್ಯಾಯವಾದಿಗಳು.
ಎದುರುದಾರರ ಪರ: ಶ್ರೀ ಎಂ.ಸಿ. ಹುಕ್ಕೇರಿ, ನ್ಯಾಯವಾದಿ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ :**

**1.** ಇದು, ಮುಧೋಳದ ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿರಿಯ ಶ್ರೇಣಿ) ನ್ಯಾಯಾಲಯವು ಓ.ಎಸ್.ಸಂ. 215/2006ರ ಮೂಲ ದಾವೆಯಲ್ಲಿ ಎದುರುದಾರ/ವಾದಿಯ ದಾವೆಯನ್ನು ಡಿಕ್ರಿಗೊಳಿಸಿ, ಕೆಂಪು ಶಾಯಿಯಲ್ಲಿ ತಯಾರಿಸಿದ ಕೈ–ಬರಹದ ನಕ್ಷೆಯಲ್ಲಿ ತೋರಿಸಿದಂತಹ 3 ಗುಂಟೆ ಅಳತೆಯ ದಾವಾ ಜಮೀನನ್ನು ತೀರ್ಪಿನ ದಿನಾಂಕದಿಂದ ಮೂರು ತಿಂಗಳುಗಳೊಳಗೆ ವಾದಿಗೆ ಹಸ್ತಾಂತರಿಸುವಂತೆ ಪ್ರತಿವಾದಿಗೆ ನಿರ್ದೇಶಿಸಿ ಮತ್ತು ಪ್ರತಿವಾದಿಯು ಕೋರಿದ ಒಡೆತನದ ಘೋಷಣೆಯ ಪರಿಹಾರವನ್ನು ಮತ್ತು ಖಾಯಂ ನಿರ್ಬಂಧಕಾಜ್ಞೆಯ ಪರಿಹಾರವನ್ನು ವಜಾಗೊಳಿಸಿ ನೀಡಿದ ದಿನಾಂಕ 15.03.2007ರ ತೀರ್ಪು ಮತ್ತು ಡಿಕ್ರಿಯನ್ನು ಆರ್.ಎ. ಸಂಖ್ಯೆ. 25/2007 ಮೇಲ್ಮನವಿಯಲ್ಲಿ ಮುಧೋಳದ ಹಿರಿಯ ಸಿವಿಲ್ ನ್ಯಾಯಾಧೀಶರ

ನ್ಯಾಯಾಲಯವು ಸ್ಥಿರೀಕರಿಸಿ ಹೊರಡಿಸಿದ ದಿನಾಂಕ 28.11.2011ರ ತೀರ್ಮ ಮತ್ತು ಡಿಕ್ರಿಯ ವಿರುದ್ಧ ಸಲ್ಲಿಸಿರುವ ಪ್ರತಿವಾದಿಯ ವಿಫಲಗೊಂಡ ಎರಡನೇ ಮೇಲ್ಮನವಿಯಾಗಿದೆ.

2. ಎದುರುದಾರ/ವಾದಿಯು ಬುಡ್ನಿ ಬಿ.ಕೆ. ಗ್ರಾಮದ ಆರ್.ಎಸ್. 98/1ರ 9 ಎಕರೆ 37 ಗುಂಟೆ ಅಳತೆಯ ದಾವಾ ಅನುಸೂಚಿ ಸ್ವತ್ತಿಗೆ ತಾನು ಒಡೆಯನೆಂದು ವಾದಿಸಿ ಮೂಲ ದಾವೆ ಸಂ.215/2006ರಲ್ಲಿ ದಾವೆಯನ್ನು ಹೂಡಿರುತ್ತಾನೆ. ಪ್ರತಿವಾದಿಯು ಅದೇ ಗ್ರಾಮದ ಆರ್.ಎಸ್.ಸಂ.97/2ರ 9 ಎಕರೆ 6 ಗುಂಟೆ ಅಳತೆಯ ಜಮೀನಿಗೆ ಒಡೆಯನೆಂದು ಹಕ್ಕು ಸಾಧಿಸಿದ್ದು, ವಾದಿ ಮತ್ತು ಪ್ರತಿವಾದಿ ಇಬ್ಬರ ಜಮೀನುಗಳು ಅಕ್ಕಪಕ್ಕದಲ್ಲಿಯೇ ಇವೆ. ಪ್ರತಿವಾದಿಯ ಜಮೀನು ವಾದಿಯ ಜಮೀನಿನ ಪೂರ್ವ ದಿಕ್ಕಿಗಿದೆ. ವಾದಿಯು ವಿಷಯದ ನೈಜ ಸಂಗತಿಗಳನ್ನು ವಿವರಿಸಿ, ಪ್ರತಿವಾದಿಯು ವಾದಿಯೊಂದಿಗೆ ಉತ್ತಮ ಸಂಬಂಧವಿಟ್ಟುಕೊಂಡಿರದೆ, ಉದ್ದೇಶಪೂರ್ವಕವಾಗಿ ವಾದಿಯ ಜಮೀನನ್ನು ಒತ್ತುವರಿ ಮಾಡಿಕೊಳ್ಳುವ ಕೆಲಸದಲ್ಲಿ ತೊಡಗಿದ್ದ ಎಂಬುದನ್ನು ವಿವರಿಸಿ, ವಾದ ಪತ್ರದೊಂದಿಗೆ ಕೈಬರಹದ ನಕ್ಷೆಯನ್ನು ಸಲ್ಲಿಸಿದ್ದ. ಪ್ರತಿವಾದಿಯ ಚಟುವಟಿಕೆಗಳ ಬಗ್ಗೆ ವಾದಿಗೆ ಸಂದೇಹ ಬಂದು ಗಡಿ ಸರಹದ್ದುಗಳನ್ನು ನಿಗದಿಪಡಿಸುವುದಕ್ಕೆ ಸರ್ವೆ ಅಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿದರು. ಅದರಂತೆ, 22.05.2000ದಂದು ವಾದಿ, ಪ್ರತಿವಾದಿ ಮತ್ತು ಇತರ ನೆರೆಹೊರೆಯ ಜಮೀನಿನ ಒಡೆಯರ ಜಮೀನುಗಳನ್ನು ಸರ್ವೇಯರ್ ಸರ್ವೆ ಮಾಡಿ, ದಿನಾಂಕ 01.08.2000ದಂದು ಸಂಬಂಧಪಟ್ಟ ಆ ಎಲ್ಲಾ ಪಕ್ಷಕಾರರ ಸಮ್ಮುಖದಲ್ಲಿ ಗಡಿಗುರುತುಗಳನ್ನು ನಿಗದಿಪಡಿಸಿದರು. ಅವರು ಹೆಚ್‌ಯುಬಿ/ಎಂಡಿಎಲ್/314/98 ಸಂಖ್ಯೆಯ ಬಿಎನ್‌ಡಿ ನಕ್ಷೆಯನ್ನು ಸಿದ್ಧಪಡಿಸಿದ್ದು, ಅದರಲ್ಲಿ ಪ್ರತಿವಾದಿಯು ವಾದಿಯ 3 ಗುಂಟೆ ಅಳತೆಯ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದ್ದು, ಅದನ್ನು ನಕ್ಷೆಯಲ್ಲಿ ಕೆಂಪು ಶಾಯಿಯಲ್ಲಿ ಗುರುತು ಮಾಡಿ ತೋರಿಸಲಾಗಿದೆ. ವಾದಿಯು ದಾವಾ ಜಮೀನನ್ನು ಎಂದರೆ ಕೆಂಪು ಶಾಯಿಯಲ್ಲಿ ವಾದಿಯ ನಕ್ಷೆಯಲ್ಲಿ ತೋರಿಸಿರುವ 3 ಗುಂಟೆ ಜಮೀನನ್ನು ಹಸ್ತಾಂತರಿಸುವಂತೆ ಕೋರಿದ್ದಾನೆ. ಅದಕ್ಕೆ ಪ್ರತಿವಾದಿಯು ಸ್ವಲ್ಪ ಕಾಲಾವಕಾಶ

ಕೊಡುವಂತೆ ಕೇಳಿ, ತದನಂತರ ಇಲ್ಲಿಯವರೆಗೂ ದಾವಾ ಸ್ವತ್ತನ್ನು ಹಸ್ತಾಂತರ ಮಾಡದೆ ವಿಳಂಬ ಮಾಡುತ್ತಲೇ ಬಂದಿದ್ದಾನೆಂದೂ ಸಹ ವಾದಿಸಲಾಗಿದೆ. ಅಲ್ಲದೆ, ಪ್ರತಿವಾದಿಯು ಸ್ವಭಾವತಃ ಒರಟು ವರ್ತನೆಯುಳ್ಳವನಾಗಿದ್ದು ವಾದಿ ಮತ್ತು ಯಾವ ಹಿರಿಯ ವ್ಯಕ್ತಿಗಳ ಮಾತಿಗೂ ಬೆಲೆ ಕೊಡುತ್ತಿಲ್ಲವೆಂದೂ ಕೂಡ ವಾದಿಸಲಾಗಿದೆ. ಆದ್ದರಿಂದ ವಾದಿಯು ಕೋರಿರುವಂತಹ ಪರಿಹಾರಕ್ಕಾಗಿ ದಾವೆಯನ್ನು ಹೂಡುವುದು ಅನಿವಾರ್ಯವಾಯಿತೆಂದು ಹೇಳಲಾಗಿದೆ.

3. ಲಿಖಿತ ಹೇಳಿಕೆಯನ್ನು ಸಲ್ಲಿಸಿದ ಪ್ರತಿವಾದಿಯು ವಾದ ಪತ್ರದ ಪ್ರತಿಪಾದನೆಗಳೆಲ್ಲವನ್ನು ನಿರಾಕರಿಸಿ, ವಾದಿಯು ಅದೇ ಗ್ರಾಮದ ಸರ್ವೆ ನಂ.98/1ರ 9 ಎಕರೆ 37 ಗುಂಟೆ ಅಳತೆಯ ಜಮೀನಿನ ಒಡೆಯನೆಂಬುದನ್ನು ಒಪ್ಪಿಕೊಂಡಿದ್ದಾನೆ. ಅಲ್ಲದೆ, ವಾದಿ ಮತ್ತು ಪ್ರತಿವಾದಿಯ ಜಮೀನುಗಳು ಅಕ್ಕಪಕ್ಕದಲ್ಲಿಯೇ ಇವೆ ಎಂಬುದನ್ನು ಮತ್ತು ಪ್ರತಿವಾದಿಯ ಜಮೀನು ವಾದಿಯ ಜಮೀನಿನ ಪೂರ್ವ ಭಾಗಕ್ಕಿವೆ ಎಂಬುದನ್ನೂ ಸಹ ಒಪ್ಪಿಕೊಂಡಿದ್ದಾನೆ. ಮುಂದುವರಿದು, ಜಮೀನಿನ ಗಡಿ ಗುರುತುಗಳನ್ನು ಮಾಡುವುದಕ್ಕಾಗಿ ಸರ್ವೆ ಅಧಿಕಾರಿಗಳಿಗೆ ವಾದಿಯು ಅರ್ಜಿ ಸಲ್ಲಿಸಿರುವುದನ್ನು ಅಲ್ಲಗಳೆದಿದ್ದಾನೆ ಮತ್ತು 22.05.2000ದಂದು ಸರ್ವೇಯರ್, ವಾದಿ ಮತ್ತು ಪ್ರತಿವಾದಿ ಹಾಗೂ ಇತರ ನೆರೆಹೊರೆಯ ಜಮೀನು ಮಾಲೀಕರ ಜಮೀನುಗಳನ್ನು ಸರ್ವೆ ಮಾಡಿ, 01.08.2000ದಂದು ಸಂಬಂಧಪಟ್ಟ ಎಲ್ಲಾ ಪಕ್ಷಕಾರರ ಸಮ್ಮುಖದಲ್ಲಿ ಗಡಿ ಗುರುತುಗಳನ್ನು ನಿಗದಿಪಡಿಸಿದ್ದಾನೆಂಬುದನ್ನೂ ಕೂಡ ನಿರಾಕರಿಸಿದ್ದಾನೆ. ಅಲ್ಲದೆ, ತದನುಸಾರವಾಗಿ, ಸಂ.ಹೆಚ್‌ಯುಬಿ/ಎಂಡಿಎಲ್/314/98 ಮೇರೆಗೆ ಪಿ.ಟಿ. ಶೀಟ್ ಅನ್ನು ತಯಾರಿಸಿರುವುದನ್ನು ನಿರಾಕರಿಸಿದ್ದಾನೆ. ಅಂತೆಯೇ ನಕ್ಷೆಯಲ್ಲಿ ಕೆಂಪು ಶಾಯಿಯಿಂದ ತೋರಿಸಿದ 3 ಗುಂಟೆ ಅಳತೆಯ ವಾದಿಯ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿದ್ದಾನೆಂಬುದನ್ನೂ ಸಹ ಅಲ್ಲಗಳೆದಿದ್ದಾನೆ. ವಾದಿಯು ದಾವಾ ಸ್ವತ್ತನ್ನು ಸ್ಪಷ್ಟವಾಗಿ ಗುರುತಿಸುವ ಹಾಗೆ ಸ್ಪಷ್ಟವಾಗಿ ವಿವರಿಸಿಲ್ಲವೆಂದು ವಾದಿಸಿದ್ದಾನೆ. 2000ದ ಆಗಸ್ಟ್ ತಿಂಗಳಿನಲ್ಲಿ, ವಾದಿಯು, ಕೆಂಪು ಶಾಯಿಯಿಂದ

ದಾವಾಪತ್ರದ ನಕ್ಷೆಯಲ್ಲಿ ತೋರಿಸಿದಂತಹ 3 ಗುಂಟೆ ಅಳತೆಯ ದಾವಾ ಜಮೀನಿನ ಸ್ವಾಧೀನವನ್ನು ಹಸ್ತಾಂತರಿಸುವಂತೆ ಕೋರಿದ್ದಾನೆಂಬುದನ್ನು ನಿರ್ದಿಷ್ಟವಾಗಿ ನಿರಾಕರಿಸಿದ್ದಾನೆ. ಮುಂದುವರಿದು, ಪ್ರತಿವಾದಿಯು 12 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದಾನೆಂಬುದು ವಾದಿಗೆ ತಿಳಿದಿದ್ದು ಮತ್ತು ಸ್ಥಳೀಯ ನಿವಾಸಿಗಳಿಗೆ ಗೊತ್ತಿರುವ ವಿಚಾರವಾಗಿದ್ದು, ವಾದಿಯು ತನ್ನ ವಾದ ಪತ್ರದ ಕೈ ಬರಹದ ನಕ್ಷೆಯಲ್ಲಿ ವಿವರಿಸಿದಂತಹ 3 ಗುಂಟೆ ವಿಸ್ತೀರ್ಣದ ದಾವಾ ಸ್ವತ್ತನ್ನು ಪ್ರತಿವಾದಿಯು ಅಬಾಧಿತವಾಗಿ, ಮುಕ್ತವಾಗಿ ಮತ್ತು ನಿರಂತರವಾಗಿ ಸ್ವಾಧೀನದಲ್ಲಿಟ್ಟುಕೊಂಡು ಉಪಭೋಗಿಸುತ್ತಿದ್ದಾನೆಂದು ವಾದಿಸಲಾಗಿದೆ. ವಸ್ತು ಸ್ಥಿತಿ ಹೀಗಿದ್ದು, ಪ್ರತಿವಾದಿಯು ದಾವಾ ಸ್ವತ್ತಿನ ಮೇಲಿನ ತನ್ನ ಸ್ವಾಮ್ಯವನ್ನು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ಪರಿಪೂರ್ಣಗೊಳಿಸಿಕೊಂಡಿದ್ದಾನೆ. ಪ್ರತಿವಾದಿಯು 3 ಗುಂಟೆಗಳ ದಾವಾ ಸ್ವತ್ತಿನ ಮೇಲೆ ಸಾಮ್ಯದಲ್ಲಿನ ತನ್ನ ಪೂರ್ವಿಕರ ಕಾಲದಿಂದಲೂ ಸ್ವಾಧೀನದಲ್ಲಿದ್ದಾನೆ. ಪ್ರತಿವಾದಿಗಿಂತ ಹಿಂದೆ, 16.10.1959ರಿಂದಲೂ ಸ್ವಾಮ್ಯವನ್ನು ಹೊಂದಿದ ಆತನ ಪೂರ್ವಿಕರು ವಾದಿಯ ಮತ್ತು ಸ್ವಾಮ್ಯದಲ್ಲಿನ ಆತನ ಪೂರ್ವಿಕರ ಹಿತಾಸಕ್ತಿಗೆ ಪ್ರತಿಯಾಗಿ ದಾವಾ ಜಮೀನಿನ ಮೇಲೆ ಅಬಾಧಿತವಾದ ಸ್ವಾಧೀನ ಮತ್ತು ಉಪಭೋಗವನ್ನು ಹೊಂದಿದ್ದರು ಮತ್ತು ಹೊಂದಿದ್ದಾರೆ. 55 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಪ್ರತಿವಾದಿಯು ವಾದಿಯ ಹಿತಾಸಕ್ತಿಗೆ ಪ್ರತಿಕೂಲವಾಗಿ ಅಬಾಧಿತವಾದ ಸ್ವಾಧೀನವನ್ನು ಹೊಂದಿದ್ದು, ವಾದಿಗೆ ತಿಳುವಳಿಕೆಯಿರುವ ಕಾಲದಿಂದಲೂ ಆ ದಾವಾ ಜಮೀನು ಸ್ವತ್ತನ್ನು ಅಬಾಧಿತವಾಗಿ, ಮುಕ್ತವಾಗಿ, ನಿರಂತರವಾಗಿ ಕಾನೂನುಬದ್ಧ ಹಕ್ಕಿನಿಂದ ಉಪಭೋಗಿಸುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ವಾದಿಯು ಸ್ವಭಾವತಃ ಒರಟನಾಗಿದ್ದು ಪ್ರತಿವಾದಿಯ ಕೋರಿಕೆಯನ್ನು ಕೇಳಿಸಿಕೊಳ್ಳಲು ಸಿದ್ಧನಿಲ್ಲ. ಹಾಗಾಗಿ, ಪ್ರತಿವಾದಿಯು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ಜಮೀನಿನ ಒಡೆಯನಾಗಿದ್ದಾನೆಂದು ಘೋಷಿಸುವಂತೆ ಕೋರಿ ವಿರುದ್ಧ ಕ್ಲೇಮನ್ನು ಸಲ್ಲಿಸುವುದನ್ನು ಬಿಟ್ಟು ಪ್ರತಿವಾದಿಗೆ ಬೇರೆ ದಾರಿಯಿಲ್ಲವೆಂದು ವಾದಿಸಲಾಗಿದೆ, ಆದ್ದರಿಂದ, ಆತನು ದಾವೆಯನ್ನು ವಜಾಗೊಳಿಸುವಂತೆ ಕೋರಿದ್ದಾನೆ.

4. ಅಧಿವಿಚಾರಣಾ ನ್ಯಾಯಾಲಯವು ವಾದ–ಪ್ರತಿವಾದಗಳ ಆಧಾರದ ಮೇಲೆ ಈ ಕೆಳಕಂಡ ವಿವಾದಾಂಶಗಳನ್ನು ರೂಪಿಸಿತು:

(i) ವಾದಿಯು ತಾನು ಮುಧೋಳ ತಾಲ್ಲೂಕಿನ ಬುಡ್ನಿ ಬಿ.ಕೆ. ಗ್ರಾಮದಲ್ಲಿರುವ ಆರ್.ಎಸ್.ಸಂ.98/1ರ 9 ಎಕರೆ 37 ಗುಂಟೆ ಜಮೀನಿನ ಒಡೆಯನೆಂಬುದನ್ನು ರುಜುವಾತುಪಡಿಸಿದ್ದಾನೆಯೇ?

(ii) ನಂತರ, ವಾದ ಪತ್ರದ ಪ್ಯಾರಾ ಸಂ.5ರಲ್ಲಿ ಆಪಾದಿಸಿದಂತೆ ಕೈಬರಹದ ನಕ್ಷೆಯಲ್ಲಿ ಕೆಂಪು ಶಾಯಿಯ ಮೂಲಕ ತೋರಿಸಿದ ವಾದಿಯ 3 ಗುಂಟೆ ವಿಸ್ತೀರ್ಣದ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿದ್ದಾನೆ ಎಂಬುದನ್ನು ವಾದಿಯು ರುಜುವಾತುಪಡಿಸಿದ್ದಾನೆಯೇ?

(iii) ವಾದಿಯು ತಾನು ಕೋರಿದಂಥ ಸ್ವಾಧೀನಕ್ಕೆ ಹಕ್ಕುಳ್ಳವನೆಂದು ರುಜುವಾತುಪಡಿಸಿರುವನೇ?

(iv) ವಾದಿಯು ತನ್ನ ವಾದಪತ್ರದ ಕಚ್ಚಾ ನಕ್ಷೆಯಲ್ಲಿ ವಿವರಿಸಿದಂಥ 3 ಗುಂಟೆ ಅಳತೆಯ ದಾವಾ ಜಮೀನಿನ ಮೇಲೆ ಪ್ರತಿವಾದಿಯು ತಾನು ಅಬಾಧಿತವಾದ ಸ್ವಾಧೀನ ಮತ್ತು ಅನುಭೋಗದಲ್ಲಿದ್ದೆನೆಂದು ರುಜುವಾತುಪಡಿಸಿರುವನೇ?

(v) ನಂತರ, ಪ್ರತಿವಾದಿಯು ತಾನು ವಾದಿ ಮತ್ತು ಆ ಸ್ಥಳದ ನಿವಾಸಿಗಳಿಗೆ ತಿಳಿದಿರುವಂತೆ ಅಬಾಧಿತವಾಗಿ,

ಮುಕ್ತವಾಗಿ, ನಿರಂತರವಾಗಿ 55 ವರ್ಷಗಳಿಗಿಂತಲೂ ಹೆಚ್ಚು, ಕಾಲದಿಂದ ದಾವಾ ಜಮೀನನ್ನು ಸ್ವಾಧೀನದಲ್ಲಿಟ್ಟುಕೊಂಡು ಅನುಭೋಗಿಸುತ್ತಿದ್ದೇನೆಂಬುದನ್ನು ಮತ್ತು ಅದೇ ರೀತಿ ಪ್ರತಿಕೂಲ ಸ್ವಾಧೀನದ ರೂಪದಲ್ಲಿ ದಾವಾ ಸ್ವತ್ತಿನ ಮೇಲೆ ತನ್ನ ಸ್ವಾಮ್ಯವನ್ನು ತಾನು ಪಕ್ಕಾ ಮಾಡಿಕೊಂಡಿದ್ದೇನೆಂಬುದನ್ನು ರುಜುವಾತುಪಡಿಸಿರುವನೇ?

(vi) ಪ್ರತಿವಾದಿಯು ಕೋರಿದಂಥ ಪ್ರತಿಕೂಲ ಸ್ವಾಧೀನದ ರೂಪದ ಘೋಷಣೆಯ ಪರಿಹಾರಕ್ಕೆ ತಾನು ಹಕ್ಕುಳ್ಳವನಾಗಿದ್ದೇನೆಂಬುದನ್ನು ರುಜುವಾತುಪಡಿಸಿರುವನೇ?

(vii) ವಾದಿಯ ವಿರುದ್ಧ ಎದುರು ಕ್ಲೇಮಿನ ರೂಪದಲ್ಲಿ ಕೋರಿದಂಥ ಖಾಯಂ ನಿರ್ಬಂಧಕಾಜ್ಞೆಯ ಪರಿಹಾರಕ್ಕೆ ತಾನು ಹಕ್ಕುಳ್ಳವನಾಗಿದ್ದೇನೆಂಬುದನ್ನು ಪ್ರತಿವಾದಿಯು ರುಜುವಾತುಪಡಿಸಿರುವನೇ?

(viii) ಆದೇಶ ಅಥವಾ ಡಿಕ್ರಿ ಯಾವುದು?

5. ವಾದಿಯು ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ, ತನ್ನನ್ನೇ ಪಿ.ಡಬ್ಲ್ಯೂ–1 ಎಂಬುದಾಗಿ, ವಿಚಾರಣೆಗೊಳಪಡಿಸಿಕೊಂಡಿದ್ದಾನೆ ಮತ್ತು ಇನ್ನೊಬ್ಬ ಸಾಕ್ಷಿದಾರನನ್ನೂ ಪಿ.ಡಬ್ಲ್ಯೂ–2 ಎಂಬುದಾಗಿ ವಿಚಾರಣೆಗೊಳಪಡಿಸಿದ್ದಾನೆ ಮತ್ತು ನಿಶಾನೆ ಪಿ–1 ರಿಂದ 3 ರವರೆಗೆ ದಸ್ತಾವೇಜುಗಳನ್ನು ಗುರುತು ಮಾಡಿಸಿದ್ದಾನೆ. ಮತ್ತೊಂದೆಡೆ, ಪ್ರತಿವಾದಿಯು ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ, ತನ್ನನ್ನೇ ಡಿಡಬ್ಲ್ಯೂ –1 ಎಂಬುದಾಗಿ ವಿಚಾರಣೆಗೊಳಪಡಿಸಿಕೊಂಡಿದ್ದಾನೆ ಮತ್ತು ಇನ್ನಿಬ್ಬರು ಸಾಕ್ಷಿದಾರರನ್ನು ಡಿಡಬ್ಲ್ಯೂ–2 ಮತ್ತು 3 ಎಂಬುದಾಗಿ

ವಿಚಾರಣೆಗೊಳಪಡಿಸಿದ್ದಾನೆ ಮತ್ತು ನಿಶಾನೆ ಡಿ–1 ರಿಂದ 3 ರವರೆಗೆ ದಸ್ತಾವೇಜುಗಳನ್ನು ಗುರುತು ಮಾಡಿಸಿದ್ದಾನೆ.

6. ಅಧಿವಿಚಾರಣಾ ನ್ಯಾಯಾಲಯವು, ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನಂತರ, ವಾದಿಯು ತಾನು ಮುಧೋಳ ತಾಲ್ಲೂಕಿನ ಬುಡ್ನಿ ಬಿ.ಕೆ. ಗ್ರಾಮದಲ್ಲಿರುವ 9 ಎಕರೆ 37 ಗುಂಟೆ ವಿಸ್ತೀರ್ಣದ ಆರ್.ಎಸ್. ಸಂ. 98/1ರ ಜಮೀನಿನ ಒಡೆಯನೆಂಬುದನ್ನು ಸಾಬೀತು ಪಡಿಸಿದ್ದಾನೆಂಬ ನಿರ್ದಿಷ್ಟ ನಿರ್ಣಯವನ್ನು ಮತ್ತು ನಂತರ ವಾದಿಯು, ವಾದ ಪತ್ರದ 5ನೇ ಸಂಖ್ಯೆಯ ಪ್ಯಾರಾದಲ್ಲಿ ಆಪಾದಿಸಿರುವಂತೆ ಕಚ್ಚಾ ನಕ್ಷೆಯಲ್ಲಿ ಕೆಂಪು ಶಾಯಿಯ ಮೂಲಕ ತೋರಿಸಲಾದ 3 ಗುಂಟೆ ವಿಸ್ತೀರ್ಣದ ವಾದಿಯ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿದ್ದು, ತಾನು ಕೋರಲಾದ ಸ್ವಾಧೀನಕ್ಕೆ ಹಕ್ಕುಳ್ಳವನೆಂಬುದನ್ನು ವಾದಿಯು ರುಜುವಾತುಪಡಿಸಿದ್ದಾನೆಂಬ ನಿರ್ದಿಷ್ಟ ನಿರ್ಣಯವನ್ನು ದಾಖಲಿಸಿಕೊಂಡಿದೆ. ಅಲ್ಲದೆ, ಅಧಿವಿಚಾರಣಾ ನ್ಯಾಯಾಲಯವು, ವಾದಪತ್ರದ ಕಚ್ಚಾ ನಕ್ಷೆಯಲ್ಲಿ ವಾದಿಯು ವಿವರಿಸಿದಂಥ 3 ಗುಂಟೆ ವಿಸ್ತೀರ್ಣದ ದಾವಾ ಜಮೀನನ್ನು ಪ್ರತಿವಾದಿಯು ಅಬಾಧಿತವಾದ ಸ್ವಾಧೀನದಲ್ಲಿ ಉಪಭೋಗಿಸುತ್ತಿಲ್ಲವೆಂಬ ನಿರ್ಣಯವನ್ನೂ ಕೂಡ ದಾಖಲಿಸಿಕೊಂಡಿದೆ ಮತ್ತು ವಾದಿ ಹಾಗೂ ಆ ಸ್ಥಳದ ಇತರ ನಿವಾಸಿಗಳಿಗೆ ತಿಳಿದಿರುವಂತೆಯೇ 55 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ದಾವಾ ಜಮೀನನ್ನು ಅಬಾಧಿತವಾಗಿ, ಮುಕ್ತವಾಗಿ, ನಿರಂತರವಾಗಿ ಸ್ವಾಧೀನದಲ್ಲಿಟ್ಟುಕೊಂಡು ತಾನು ಅನುಭೋಗಿಸುತ್ತಿದ್ದು, ಅಂತೆಯೇ ದಾವಾ ಸ್ವತ್ತಿನ ಮೇಲೆ ತನ್ನ ಸ್ವಾಮ್ಯವನ್ನು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ಪಕ್ಕಾ ಮಾಡಿಕೊಂಡಿದ್ದೇನೆ ಎಂಬುದನ್ನು ಪ್ರತಿವಾದಿಯು ರುಜುವಾತುಪಡಿಸಲು ವಿಫಲನಾಗಿದ್ದಾನೆ ಎಂದು ಮತ್ತು ಕೋರಲಾದ ಪ್ರತಿಕೂಲ ಸ್ವಾಧೀನ ರೂಪದ ಘೋಷಣೆಯ ಪರಿಹಾರಕ್ಕೆ ತಾನು ಹಕ್ಕುಳ್ಳವನಾಗಿದ್ದೇನೆ ಎಂಬುದನ್ನು ಪ್ರತಿವಾದಿಯು ರುಜುವಾತುಪಡಿಸಲು ವಿಫಲನಾಗಿದ್ದಾನೆಂದು ನಿರ್ಣಯಿಸಿದೆ. ಅಷ್ಟೇ ಅಲ್ಲದೆ ಎದುರು ಕ್ಲೇಮಿನ ರೂಪದಲ್ಲಿ ಕೋರಲಾದಂತಹ ವಾದಿಯ ವಿರುದ್ಧದ ಖಾಯಂ ನಿರ್ಬಂಧಕಾಜ್ಞೆಯ ಪರಿಹಾರಕ್ಕೆ ತಾನು ಹಕ್ಕುಳ್ಳವನೆಂಬುದನ್ನು ರುಜುವಾತುಪಡಿಸಲು ಪ್ರತಿವಾದಿಯು ವಿಫಲನಾಗಿದ್ದಾನೆ

ಎಂದೂ ಕೂಡ ನ್ಯಾಯಾಲಯವು ನಿರ್ಣಯಿಸಿದೆ. ಅದರಂತೆ, ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ಡಿಕ್ರಿ ಮಾಡಿ, ವಾದಪತ್ರದ ಕಚ್ಚಾ ನಕ್ಷೆಯಲ್ಲಿ ಕೆಂಪು ಶಾಯಿಯ ಮೂಲಕ ತೋರಿಸಲಾದ 3 ಗುಂಟೆ ವಿಸ್ತೀರ್ಣದ ದಾವಾ ಜಮೀನಿನ ಸ್ವಾಧೀನವನ್ನು ವಾದಿಗೆ ಈ ಆದೇಶದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಹಸ್ತಾಂತರಿಸುವಂತೆ ಪ್ರತಿವಾದಿಗೆ ನಿರ್ದೇಶಿಸಿದೆ ಮತ್ತು ಎದುರು ಕ್ಲೇಮಿನ ರೂಪದಲ್ಲಿ ಪ್ರತಿವಾದಿಯು ಕೋರಿದ ಒಡೆತನದ ಘೋಷಣೆಯ ಪರಿಹಾರದ ಮತ್ತು ಖಾಯಂ ನಿರ್ಬಂಧಕಾಜ್ಞೆಯ ಪರಿಹಾರದ ಕೋರಿಕೆಯನ್ನು ವಜಾಗೊಳಿಸಿತು.

7. 3 ಗುಂಟೆ ವಿಸ್ತೀರ್ಣದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯವು ವಾದಿಯ ಪರವಾಗಿ ಡಿಕ್ರಿಯನ್ನು ನೀಡಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತನಾದ ಪ್ರತಿವಾದಿಯು ಮುಧೋಳದ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಆರ್.ಎ.ಸಂ.25/2007 ಮೇಲ್ಮನವಿಯನ್ನು ಸಲ್ಲಿಸಿದನು. ಒಪ್ಪಿಕೊಳ್ಳಲಾಗಿರುವಂತೆ, ಪ್ರತಿವಾದಿಯು ಕೋರಿದ್ದಂತಹ ಒಡೆತನದ ಘೋಷಣೆಯ ಪರಿಹಾರದ ಹಾಗೂ ಖಾಯಂ ನಿರ್ಬಂಧಕಾಜ್ಞೆಯ ಪರಿಹಾರದ ತನ್ನ ಎದುರು ಕ್ಲೇಮು ವಜಾಗೊಂಡಿದ್ದರ ವಿರುದ್ಧ ಪ್ರತಿವಾದಿಯು ಯಾವುದೇ ಮೇಲ್ಮನವಿಯನ್ನು ಸಲ್ಲಿಸಲಿಲ್ಲ. ಉಭಯ ಪಕ್ಷಕಾರರ ಅಹವಾಲುಗಳನ್ನು ಆಲಿಸಿದ ನಂತರ ಮುಧೋಳದ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ತಮ್ಮ ದಿನಾಂಕ 28.11.2011ರ ತೀರ್ಪು ಮತ್ತು ಡಿಕ್ರಿಯ ಮೂಲಕ ಮೇಲ್ಮನವಿಯನ್ನು ವಜಾಗೊಳಿಸಿ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಸ್ಥಿರೀಕರಿಸಿದರು.

8. ಅಧೀನ ನ್ಯಾಯಾಲಯಗಳು ದಾಖಲಿಸಿದ ಒಮ್ಮತದ ವಾಸ್ತವ ಸಂಗತಿಯ ನಿರ್ಣಯಗಳ ವಿರುದ್ಧ ಹೋರಾಟದ ಕೊನೆಯ ಪ್ರಯತ್ನವಾಗಿ ನಿಯತ ಎರಡನೆ ಮೇಲ್ಮನವಿಯನ್ನು ಸಲ್ಲಿಸಲು ಪ್ರತಿವಾದಿಯು ಹಿಮ್ಮೆಟ್ಟಲಿಲ್ಲ.

9. ಮೇಲ್ಕಂಡ ವಿಷಯವನ್ನು 01.10.2012ರಂದು ಅಂಗೀಕಾರಕ್ಕೆ ಒಪ್ಪಿಸಲಾಯಿತು. ಎದುರುದಾರರ ಪರ ಮಾನ್ಯ ನ್ಯಾಯವಾದಿ/ಕೇವಿಯೇಟರ್

ಕೋರಿಕೆಯಂತೆ ವಿಷಯವನ್ನು ಮುಂದೂಡಲಾಯಿತು. ಪುನಃ 23.11.2012ರಂದು ವಿಷಯವನ್ನು ಅಂಗೀಕಾರಕ್ಕೆ ಒಪ್ಪಿಸಲಾಯಿತು. ಮೇಲ್ಮನವಿದಾರರ ಪರ ನ್ಯಾಯವಾದಿಯ ಕೋರಿಕೆಯಂತೆ ಅದನ್ನು 02.07.2013ಕ್ಕೆ ಮುಂದೂಡಲಾಯಿತು. ಪುನಃ ವಿಷಯವನ್ನು 03.07.2013ಕ್ಕೆ ಒಪ್ಪಿಸಲಾಯಿತು. 03.07.2013ರಂದು ಎದುರುದಾರರ ಪರ ಮಾನ್ಯ ನ್ಯಾಯವಾದಿ/ಕೇವಿಯೇಟರ್ ಹಾಜರಿದ್ದರು, ಆದರೆ, ಮೇಲ್ಮನವಿದಾರರ ಪರವಾಗಿ ಯಾವುದೇ ಪ್ರತಿನಿಧಿ ಹಾಜರಿರಲಿಲ್ಲ. ವಿಷಯವನ್ನು ಮುಂದಿನ ವಾರಕ್ಕೆ ಮುಂದೂಡಲಾಯಿತು. ಮತ್ತೆ 24.08.2013ರಂದು ವಿಷಯವನ್ನು ಮಂಡಿಸಲಾಯಿತು. ಅಂದು, ಎದುರುದಾರರ ಪರ ನ್ಯಾಯವಾದಿ/ಕೇವಿಯೇಟರ್, ಇ.ಪಿ.ಸಂ.30/2007ರಲ್ಲಿನ ಆದೇಶ ಪ್ರತಿಯೊಂದಿಗೆ, ತಾವು ಸಲ್ಲಿಸಿದ್ದ ದಾವೆಯು ಡಿಕ್ರಿಯಾಗಿತ್ತು ಮತ್ತು ಮೇಲ್ಮನವಿದಾರನು ಸಲ್ಲಿಸಿದ್ದ ಮೇಲ್ಮನವಿಯು ವಜಾಗೊಂಡಿದೆ ಹಾಗೂ ಇ.ಪಿ.ಸಂ.30/2007ರಲ್ಲಿನ ಡಿಕ್ರಿಯು 21.8.2013ರಂದು ಕಾರ್ಯಗತಗೊಂಡಿದೆ ಎಂದು ತಿಳಿಸುವ ಮೆಮೋವನ್ನು ಸಲ್ಲಿಸಿದರು. ಆದ್ದರಿಂದ, ಪ್ರಸ್ತುತ ಮೇಲ್ಮನವಿಯಲ್ಲಿ ಬಾಕಿಯೇನೂ ಉಳಿದಿಲ್ಲವೆಂದು ವಾದಿಸಿದರು.

10. ಆ ಹಂತದಲ್ಲಿ, ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಬಿ.ಡಿ. ಹೆಗಡೆಯವರನ್ನು ಪ್ರತಿನಿಧಿಸಿದ ಮಾನ್ಯ ನ್ಯಾಯವಾದಿ ಶ್ರೀ ಹನುಮಂತರೆಡ್ಡಿ ಸಾಹುಕಾರ್ ಅವರು ಕಾಲಾವಕಾಶಕ್ಕಾಗಿ ಕೋರಿಕೆ ಸಲ್ಲಿಸಿದರು. ವಿಷಯವನ್ನು 26.08.2015ರಂದು ಮತ್ತು 01.10.2015ರಂದು ಅಂಗೀಕಾರಕ್ಕೆ ಮಂಡಿಸಲಾಯಿತು. ಪದೇ ಪದೇ ಮುಂದೂಡಿಕೆಗಳನ್ನು ನೀಡಿದರೂ ಕೂಡ ಮೇಲ್ಮನವಿದಾರರ ಪರ ಯಾರೂ ಹಾಜರಾಗಲಿಲ್ಲ. ಆದಾಗ್ಯೂ, ವಿಷಯವು 2012ನೇ ಇಸವಿಯದ್ದಾಗಿದ್ದು, ಅದನ್ನು ಅಂಗೀಕಾರಕ್ಕಾಗಿ ಮಂಡಿಸಿ, ಎದುರುದಾರರ ಪರ ಮಾನ್ಯ ನ್ಯಾಯವಾದಿಯ ಅಹವಾಲನ್ನು ಆಲಿಸಿ, ವಿಷಯವನ್ನು 07.10.2015ಕ್ಕೆ ತೀರ್ಪಿನ ಉಲ್ಲೇಖನ ನೀಡಲು ಮಂಡಿಸಲಾಯಿತು. 07.10.2015ರಂದು ಮತ್ತೊಮ್ಮೆ ಮೇಲ್ಮನವಿದಾರರ ಪರ ಯಾರೂ ಹಾಜರಾಗಲಿಲ್ಲ ಮತ್ತು ಮೊಕದ್ದಮೆಯನ್ನು ಇಂದು ತೀರ್ಪಿನ ಉಲ್ಲೇಖನಕ್ಕಾಗಿ ಮಂಡಿಸಲಾಯಿತು. ವಿಷಯವು 2012ನೇ ಇಸವಿಯದ್ದಾಗಿದೆ. ಮೇಲ್ಮನವಿದಾರರಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ, ಅದನ್ನು ಯಾರೂ

ಪ್ರತಿನಿಧಿಸಲಿಲ್ಲ. ವಿಷಯವನ್ನು ಪದೇ ಪದೇ ಅಂಗೀಕಾರಕ್ಕಾಗಿ ಮಂಡಿಸಿದ್ದು, ಯಾರೂ ಹಾಜರಾಗದಿದ್ದುದರಿಂದ, ಈ ನ್ಯಾಯಾಲಯಕ್ಕೆ ಈ ಮೊಕದ್ದಮೆಯಲ್ಲಿ ಮೇಲ್ಮನವಿದಾರನು ಮೊಕದ್ದಮೆಯನ್ನು ಅಂಗೀಕಾರಕ್ಕಾಗಿ ಸಲ್ಲಿಸಿದ್ದನೇ ಅಥವಾ ಇಲ್ಲವೇ ಎಂಬುದನ್ನು ನಿರ್ಣಯಿಸುವುದಕ್ಕೆ, ತೊಡಗುವುದರ ಹೊರತು ಬೇರೆ ಪರ್ಯಾಯ ಮಾರ್ಗವಿರಲಿಲ್ಲ. ತದನುಸಾರವಾಗಿ, ಅಧೀನ ನ್ಯಾಯಾಲಯಗಳ ತೀರ್ಪುಗಳು ಮತ್ತು ಡಿಕ್ರಿಯನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಯಿತು.

11. ಎದುರುದಾರರ ಪರ ಮಾನ್ಯ ನ್ಯಾಯವಾದಿಯ ಅಹವಾಲನ್ನು ಆಲಿಸಲಾಯಿತು.

12. ಎದುರುದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಎಂ.ಸಿ. ಹುಕ್ಕೇರಿ ಅವರನ್ನು ಅಧೀನ ನ್ಯಾಯಾಲಯಗಳ ತೀರ್ಪುಗಳು ಮತ್ತು ಡಿಕ್ರಿಗಳನ್ನು ಸಮರ್ಥಿಸುವಂತೆ ಕೋರಲಾಯಿತು.

13. ನಿಯತ ಎರಡನೇ ಮೇಲ್ಮನವಿಯ ಮೆಮೋರಂಡಮ್‌ನಲ್ಲಿ ನೀಡಿದ ಕಾರಣಗಳನ್ನು ಮತ್ತು ನಿಯತ ಎರಡನೇ ಮೇಲ್ಮನವಿಯ ಮೆಮೋರಂಡಮ್ ರೂಪಿಸಿದ ಮಹತ್ವದ ಕಾನೂನು ಪ್ರಶ್ನೆಗಳನ್ನು ನಾನು ತೀವ್ರವಾದ ಪರಿಗಣನೆಗೆ ಒಳಪಡಿಸಿದ್ದೇನೆ ಮತ್ತು ಎದುರುದಾರರ ಪರ ಮಾನ್ಯ ನ್ಯಾಯವಾದಿಯು ಮಂಡಿಸಿದ ವಾದಗಳನ್ನು ಕೂಡ ಪರಿಗಣಿಸಿದ್ದೇನೆ ಹಾಗೂ ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ್ದೇನೆ.

14. ವಾದಿಯ ಮೊಕದ್ದಮೆಯ ಸಾರ ಇಂತಿದೆ: ಮುಧೋಳ ತಾಲ್ಲೂಕಿನ ಬುಡ್ನಿ ಬಿ.ಕೆ. ಗ್ರಾಮದಲ್ಲಿರುವ 9 ಎಕರೆ 37 ಗುಂಟೆ ವಿಸ್ತೀರ್ಣದ ಆರ್.ಎಸ್. ಸಂ.98/1ರ ದಾವಾ ಅನುಸೂಚಿ ಸ್ವತ್ತಿಗೆ ತಾನು ಒಡೆಯನಾಗಿದ್ದೇನೆ. ತನ್ನ ಜಮೀನು ಮತ್ತು ಪ್ರತಿವಾದಿಯ ಜಮೀನುಗಳು ಅಕ್ಕಪಕ್ಕದಲ್ಲಿಯೇ ಇವೆ. ಪ್ರತಿವಾದಿಯು ಅದೇ ಗ್ರಾಮದ ತನ್ನ ಜಮೀನಿನ ಪಕ್ಕದ 9 ಎಕರೆ 6 ಗುಂಟೆ ವಿಸ್ತೀರ್ಣದ

ಆರ್.ಎಸ್. ಸಂ.97/2ರ ಜಮೀನಿನ ಒಡೆಯನಾಗಿದ್ದು, ಆತನು ತನ್ನ ಜಮೀನಿನ 3 ಗುಂಟೆ ವಿಸ್ತೀರ್ಣದ ಜಮೀನನ್ನು ಎಂದರೆ ದಾವಾ ಅನುಸೂಚಿ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿದ್ದಾನೆ ಎಂಬುದು ವಾದಿಯ ವಾದವಾಗಿದೆ.

15. ವಾದಿಯ ಹೇಳಿಕೆಗಳನ್ನು ನಿರಾಕರಿಸಿ ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ತಾನು 50 ವರ್ಷಗಳಿಗಿಂತಲೂ ಹೆಚ್ಚು ಕಾಲ 3 ಗುಂಟೆ ಅಳತೆಯ ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನದಲ್ಲಿದ್ದೇನೆಂದು ಅವನು ವಾದಿಸಿ, ವಾದಿಯ ಹಿತಾಸಕ್ತಿಗೆ ಪ್ರತಿಕೂಲವಾದ ತನ್ನ ಸ್ವಾಧೀನವನ್ನು ಕ್ಲೇಮು ಮಾಡಿದ್ದಾನೆ.

16. ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರವನ್ನು ಪರಿಗಣಿಸಿ ಮತ್ತು ಲಿಖಿತ ಹೇಳಿಕೆಯ 2ನೇ ಪ್ಯಾರಾವನ್ನು ಪರಿಗಣನೆಗೆ ತೆಗೆದುಕೊಂಡು ವಾದಿಯು ಬುಡ್ನಿ ಬಿ.ಕೆ. ಗ್ರಾಮದಲ್ಲಿರುವ 9 ಎಕರೆ 37 ಗುಂಟೆ ವಿಸ್ತೀರ್ಣದ ಆರ್.ಎಸ್. ಸಂ.98/1ರ ಜಮೀನಿನ ಒಡೆಯನೆಂದು ನಿರ್ಣಯಿಸಿದೆ. ತದನುಸಾರವಾಗಿ ವಿವಾದಾಂಶ ಸಂ.1ಕ್ಕೆ ಹೌದು ಎಂದು ಸಕಾರಾತ್ಮಕವಾಗಿ ನಿರ್ಣಯಿಸಿದೆ. ವಾದಿಯು ತನ್ನ ವಾದಪತ್ರದ ಕಚ್ಚಾ ನಕ್ಷೆಯಲ್ಲಿ ವಿವರಿಸಿರುವಂತಹ 3 ಗುಂಟೆ ವಿಸ್ತೀರ್ಣದ ದಾವಾ ಜಮೀನಿನ ಮೇಲೆ ವಾದಿಗೆ ಮತ್ತು ಆ ಸ್ಥಳದ ಇತರ ಎಲ್ಲಾ ನಿವಾಸಿಗಳಿಗೆ ತಿಳಿದಿರುವಂತೆ 12 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಅಬಾಧಿತವಾದ, ಮುಕ್ತವಾದ, ನಿರಂತರವಾದ ಸ್ವಾಧೀನದಲ್ಲಿ ತಾನು ಇದ್ದೆನೆಂದು ಪ್ರತಿವಾದಿಯು ವಾದಿಸಿರುವುದನ್ನೂ ಕೂಡ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿಕೊಂಡಿದೆ. ಆದ್ದರಿಂದ, ದಾವಾ ಸ್ವತ್ತಿನ ಮೇಲೆ ಪ್ರತಿಕೂಲ ಸ್ವಾಧೀನದ ರೂಪದಲ್ಲಿ ತನ್ನ ಸ್ವಾಮ್ಯವನ್ನು ತಾನು ಪಕ್ಕಾ ಮಾಡಿಕೊಂಡಿದ್ದೆ ಎಂಬುದು ಪ್ರತಿವಾದಿಯ ನಿರ್ದಿಷ್ಟ ಪ್ರತಿವಾದವಾಗಿದ್ದು, ಆ ಮೂಲಕ ಪ್ರತಿವಾದಿಯು ತಾನು ದಾವಾ ಅನುಸೂಚಿ ಸ್ವತ್ತಿನ ಒಡೆಯನೆಂದು ಮತ್ತು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ಅದರ ಸ್ವಾಧೀನದಲ್ಲಿದ್ದೇನೆಂದು ಘೋಷಿಸುವಂತೆ ಸಿವಿಲ್ ಪ್ರಕ್ರಿಯಾ

ಸಂಹಿತೆಯ ಕ್ರಮಾದೇಶ VIIIರ ನಿಯಮ 6ಎ ಅಡಿಯಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಮೂಲಕ ಒಂದು ನಿರ್ದಿಷ್ಟ ಪ್ರತಿರಕ್ಷೆಯನ್ನು ರೂಪಿಸಿಕೊಂಡಿದ್ದಾನೆ.

17. ವಾದಿಯು ಒತ್ತುವರಿಯನ್ನು ರುಜುವಾತುಪಡಿಸುವ ಸಲುವಾಗಿ ತನ್ನನ್ನೇ ಪಿ.ಡಬ್ಲ್ಯೂ.1 ಎಂದು ವಿಚಾರಣೆಗೊಳಪಡಿಸಿಕೊಂಡು, ಪ್ರತಿವಾದಿಯು ತನ್ನೊಂದಿಗೆ ಉತ್ತಮ ಸಂಬಂಧ ಹೊಂದಿರಲಿಲ್ಲ ಮತ್ತು ಉದ್ದೇಶಪೂರ್ವಕವಾಗಿ ತನ್ನ ಜಮೀನನ್ನು ಒತ್ತುವರಿ ಮಾಡಿಕೊಳ್ಳಲು ಪ್ರಾರಂಭಿಸಿದ್ದ ಮತ್ತು ತನಗೆ ಪ್ರತಿವಾದಿಯ ಚಟುವಟಿಕೆಗಳ ಬಗ್ಗೆ ಸಂದೇಹ ಬಂದಾಗ ತಾನು ಗಡಿ ಗುರುತುಗಳನ್ನು ನಿಗದಿಪಡಿಸುವುದಕ್ಕಾಗಿ ಸರ್ವೆ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿದ್ದೆ, ಅದರಂತೆ, 22.5.2000ದಂದು ಸರ್ವೇಯರ್ ಬಂದು ತನ್ನ ಜಮೀನು ಹಾಗೂ ಪ್ರತಿವಾದಿಯ ಜಮೀನು ಮತ್ತು ಇತರ ನೆರೆಹೊರೆಯ ಜಮೀನುಗಳನ್ನು ಸಂಬಂಧಪಟ್ಟ ಎಲ್ಲಾ ಪಕ್ಷಕಾರರ ಸಮ್ಮುಖದಲ್ಲಿ ಸರ್ವೆ ಮಾಡಿದರು, ತದನಂತರ, 01.08.2000ದಂದು ಸರ್ವೇಯರ್ ಸಂಬಂಧಪಟ್ಟ ಎಲ್ಲಾ ಪಕ್ಷಕಾರರ ಸಮ್ಮುಖದಲ್ಲಿ ಗಡಿ ಸರಹದ್ದುಗಳನ್ನು ನಿಗದಿಪಡಿಸಿ, ಆ ಪ್ರಕಾರವಾಗಿ ನಿಶಾನೆ ಪಿ.1 ಎಂದು ಹಾಜರುಪಡಿಸಿರುವ, ವಾದಿಯ ಜಮೀನಿನಲ್ಲಿ 3 ಗುಂಟೆ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿರುವುದನ್ನು ತೋರಿಸಿರುವ ಬಿ.ಎನ್.ಡಿ ನಕ್ಷೆಯೊಂದನ್ನು ಸಿದ್ಧಪಡಿಸಿದರೆಂದು ಹೇಳಿಕೆ ನೀಡಿರುವುದನ್ನು ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿಕೊಂಡಿದೆ. ವಾದಿಯ ಪ್ರಕಾರ, 3 ಗುಂಟೆ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿರುವುದನ್ನು ತೋರಿಸುವ ನಕ್ಷೆಯನ್ನು ಸರ್ವೇಯರ್ ಕೂಡ ಸಿದ್ಧಪಡಿಸಿದ್ದರು ಎಂಬುದಾಗಿದೆ. ಪಿ.ಡಬ್ಲ್ಯೂ.1 ಮತ್ತು 2 ತಮ್ಮ ಪಾಟೀ ಸವಾಲಿನಲ್ಲಿ ನಿರ್ದಿಷ್ಟವಾಗಿ ಪ್ರತಿವಾದಿಯು ಕಚ್ಚಾ ನಕ್ಷೆಯಲ್ಲಿ ತೋರಿಸಲಾಗಿರುವ 3 ಗುಂಟೆ ವಿಸ್ತೀರ್ಣದ ಜಮೀನನ್ನು ಸ್ವಾಧೀನದಲ್ಲಿಟ್ಟುಕೊಂಡು ಉಪಭೋಗಿಸುತ್ತಿದ್ದಾನೆಂದು ಪ್ರತಿಜ್ಞಾ ಬೋಧನೆಯ ಮೇಲೆ ಹೇಳಿಕೆ ನೀಡಿದ್ದಾರೆ. ಡಿಡಬ್ಲ್ಯೂ.1 ತನ್ನ ಸಾಕ್ಷ್ಯದಲ್ಲಿ ವಾದಿಯ ಜಮೀನು ಮತ್ತು ತನ್ನ ಜಮೀನು ಅಕ್ಕಪಕ್ಕದಲ್ಲಿಯೇ ಇವೆ ಹಾಗೂ ತನ್ನ ಸ್ವತ್ತು ವಾದಿಯ ಜಮೀನಿನ ಪೂರ್ವದಿಕ್ಕಿಗಿದೆ ಎಂಬ ಸಂಗತಿಯನ್ನು ಅಲ್ಲಗಳೆದಿಲ್ಲ. ಪಾಟೀ ಸವಾಲಿನ ಅವಧಿಯಲ್ಲಿ, ಡಿಡಬ್ಲ್ಯೂ.1 ತನಗೆ 01.08.2000ದಂದು ಸರ್ವೆ ಮಾಡಿದ ನಂತರ

ವಾದಿಯ ಸ್ವತ್ತಿನಲ್ಲಿ 3 ಗುಂಟೆ ಜಮೀನು ಒತ್ತುವರಿಯಾಗಿರುವ ಬಗ್ಗೆ ತಿಳಿದುಬಂತು ಎಂಬುದನ್ನು ಒಪ್ಪಿಕೊಂಡಿದ್ದಾನೆ. ಅಲ್ಲದೆ, ಸದರಿ ಸರ್ವೆಯ ವಿರುದ್ಧ ಇತರ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂಬುದನ್ನೂ ಕೂಡ ಆತನು ಒಪ್ಪಿಕೊಂಡಿದ್ದಾನೆ. ಸುಮಾರು 50 ಅಥವಾ 60 ವರ್ಷಗಳಿಂದ ತನ್ನ ಜಮೀನಿಗೆ ಸಂಬಂಧಿಸಿದ ಆರ್.ಟಿ.ಸಿ.ಯಲ್ಲಿ ತೋರಿಸಲಾದ ಜಮೀನಿನ ಸ್ವಾಧೀನದಲ್ಲಿದ್ದು, ಅದನ್ನು ಅನುಭೋಗಿಸುತ್ತಿದ್ದೇನೆ ಎಂದು ಆತನು ಹೇಳಿಕೆ ನೀಡಿದ್ದಾನೆ. ಆತನ ಲಿಖಿತ ಹೇಳಿಕೆಯಲ್ಲಿ ತಾನು ದಾವಾ ಜಮೀನಿನ ಮೇಲೆ ಕಾನೂನು ಬಾಹಿರವಾಗಿ ಅಬಾಧಿತವಾದ ಸ್ವಾಧೀನದಲ್ಲಿದ್ದೇನೆಂದು ಆತನು ಹೇಳಿಲ್ಲ. ಅಲ್ಲದೆ, ವಾದಿಗೆ ಸೇರಿದ ಜಮೀನಿಗೆ ತಾನು ಒಡೆಯನೆಂದು ಆತನು ಲಿಖಿತ ಹೇಳಿಕೆಯಲ್ಲಿ ತಿಳಿಸಿಲ್ಲವೆಂದೂ ಕೂಡ ಆತನು ಒಪ್ಪಿಕೊಂಡಿದ್ದಾನೆ. 50 ವರ್ಷಗಳಿಂದ ಮತ್ತು 12 ವರ್ಷಗಳ ಅವಧಿಯೊಳಗೆ ತಾನು ವಾದಿಯ ವಿರುದ್ಧ ಯಾವುದೇ ದಾವೆಯನ್ನು ಹೂಡಿಲ್ಲವೆಂದೂ ಕೂಡ ಆತನು ಒಪ್ಪಿಕೊಂಡಿದ್ದಾನೆ. ಪಾಟೀ ಸವಾಲಿನ ಅವಧಿಯಲ್ಲಿ ಆತನು, 1977ನೇ ಇಸವಿಯಲ್ಲಿ ಸರ್ವೆ ಕಾರ್ಯವನ್ನು ನಡೆಸಲಾಗಿತ್ತು ಮತ್ತು ಆಗಲೂ, ಈಗಲೂ ವಾದಿಯು ಅಳತೆಯ ಬಗ್ಗೆ ಆಕ್ಷೇಪಿಸುತ್ತಲೇ ಇದ್ದಾನೆಂದು ತಿಳಿಸಿ, 1977ನೇ ವರ್ಷಾವಧಿಯಲ್ಲಿನ ಪಿ.ಟಿ.ಶೀಟ್ ಅನ್ನು ಹಾಜರುಪಡಿಸಿದ್ದಾನೆ. ಪ್ರತಿವಾದಿಯು ಇಬ್ಬರು ಸ್ವತಂತ್ರ ಸಾಕ್ಷಿದಾರರನ್ನೂ ಕೂಡ ಡಿ.ಡಬ್ಲ್ಯೂ–2 ಮತ್ತು 3 ಎಂಬುದಾಗಿ ವಿಚಾರಣೆಗೊಳಪಡಿಸಿದ್ದಾನೆ. ಅವರು ವಾದಿಯು ವಾದಪತ್ರದ ಕಚ್ಚಾ ನಕ್ಷೆಯಲ್ಲಿ ವಿವರಿಸಿರುವಂತಹ 3 ಗುಂಟೆ ಅಳತೆಯ ದಾವಾ ಜಮೀನಿನ ಮೇಲೆ ಪ್ರತಿವಾದಿಯು ಅಬಾಧಿತ ಸ್ವಾಧೀನದಲ್ಲಿದ್ದು ಅನುಭೋಗಿಸುತ್ತಿದ್ದಾನೆಂದು ತಿಳಿಸಿದ್ದಾರೆ ಹಾಗೂ 12 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಪ್ರತಿವಾದಿಯು ವಾದಿಗೆ ಮತ್ತು ಸ್ಥಳೀಯ ನಿವಾಸಿಗಳಿಗೆ ತಿಳಿದಿರುವಂತೆ ದಾವಾ ಜಮೀನನ್ನು ಅಬಾಧಿತವಾಗಿ, ಮುಕ್ತವಾಗಿ, ನಿರಂತರವಾಗಿ ಸ್ವಾಧೀನದಲ್ಲಿಟ್ಟುಕೊಂಡು ಅನುಭೋಗಿಸುತ್ತಿದ್ದಾನೆಂದು ಹೇಳಿದ್ದಾರೆ. ಆದರೆ, ಪ್ರತಿಕೂಲ ಸ್ವಾಮ್ಯ ಅಥವಾ ಪ್ರತಿಕೂಲ ಸ್ವಾಧೀನ ಎಂದರೆ ಏನು ಎಂಬುದು ತಮಗೆ ತಿಳಿದಿಲ್ಲವೆಂದು ಅವರು ಹೇಳಿದ್ದಾರೆ. ಮುಂದೆ, ಡಿಡಬ್ಲ್ಯೂ–2 ವಾದಿಯು ಹಾಜರುಪಡಿಸಿರುವ ಕಚ್ಚಾ ನಕ್ಷೆಯು ಒಂದಿಷ್ಟೂ ಸರಿಯಿಲ್ಲ ಎಂದು ತಿಳಿಸಿದ್ದು,

ಕಚ್ಚಾ ನಕ್ಷೆಯನ್ನು ತಾನು ನೋಡಿಲ್ಲವೆಂದು ಒಪ್ಪಿಕೊಂಡಿದ್ದಾನೆ. ಡಿಬ್ಲ್ಯೂ–3 ಕೂಡ ಆತನ ಪಾಟೀಸವಾಲಿನ ಅವಧಿಯಲ್ಲಿ ಜಮೀನುಗಳನ್ನು ಸರ್ವೆ ಮಾಡುವ ಅವಧಿಯಲ್ಲಿ ತಾನು ಹಾಜರಿರಲಿಲ್ಲವೆಂದು ಮತ್ತು ಪ್ರತಿಕೂಲ ಸ್ವಾಮ್ಯ ಅಥವಾ ಪ್ರತಿಕೂಲ ಸ್ವಾಧೀನ ಎಂದರೇನೆಂದು ತನಗೆ ತಿಳಿದಿಲ್ಲವೆಂದು ಹೇಳಿದ್ದಾನೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು ಎರಡೂ ಕಡೆಯ ದಸ್ತಾವೇಜುಗಳು ಮತ್ತು ಸಾಕ್ಷ್ಯದಿಂದ ವಾದಿಯು ತಿಳಿಸಿರುವಂತೆ ಆತನ ಕೈಬರಹದ ನಕ್ಷೆಯಲ್ಲಿ ಕೆಂಪು ಶಾಯಿಯಿಂದ ತೋರಿಸಿದ 3 ಗುಂಟೆ ವಿಸ್ತೀರ್ಣದ ದಾವಾ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿದ್ದಾನೆಂಬುದು ಸ್ಪಷ್ಟವಾಗುತ್ತದೆಂಬ ನಿರ್ಣಯವನ್ನು ದಾಖಲಿಸಿದೆ. ಪಾಟೀ ಸವಾಲಿನ ಅವಧಿಯಲ್ಲಿ ಡಿಡಬ್ಲ್ಯೂ–1 ದಾವಾ ಜಮೀನನ್ನು ತಾನು ಇತ್ತೀಚೆಗೆ ಒತ್ತುವರಿ ಮಾಡಿಕೊಂಡಿದ್ದೇನೆಂಬುದನ್ನು ನಿರಾಕರಿಸಿದ್ದರೂ, 50 ರಿಂದ 55 ವರ್ಷಗಳಿಂದ 3 ಗುಂಟೆ ವಿಸ್ತೀರ್ಣ ದಾವಾ ಜಮೀನು ತನ್ನ ಸ್ವಾಧೀನದಲ್ಲಿದ್ದು ಅನುಭೋಗಿಸುತ್ತಿದ್ದೇನೆ ಮತ್ತು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ದಾವಾ ಜಮೀನಿನ ಮೇಲಿನ ಸ್ವಾಮ್ಯವನ್ನು ತಾನು ಪಕ್ಕಾ ಮಾಡಿಕೊಂಡಿದ್ದೇನೆ ಎಂಬುದು ಪ್ರತಿವಾದಿಯ ನಿರ್ದಿಷ್ಟ ವಾದವಾಗಿದೆ.

18. ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದ ಕಾನೂನಿಗೆ ಸಂಬಂಧಪಟ್ಟಂತೆ ದಾವೆಯ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಆಧಾರವಾಗಿಟ್ಟುಕೊಂಡ ಈ ನ್ಯಾಯಾಲಯದ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ವಿವಿಧ ತೀರ್ಪುಗಳನ್ನು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು 3 ಗುಂಟೆ ಅಳತೆಯ ದಾವಾ ಜಮೀನನ್ನು ಪ್ರತಿವಾದಿಯು ಸ್ವಾಧೀನದಲ್ಲಿಟ್ಟುಕೊಂಡು ಅನುಭೋಗಿಸುತ್ತಿದ್ದರೂ, ಪ್ರತಿಕೂಲ ಉದ್ದೇಶದಂತಹ ಇತರ ಒಳಾಂಶಗಳು ಇಲ್ಲಿ ಕಾಣೆಯಾಗಿವೆ ಎಂಬ ನಿರ್ಣಯವನ್ನೂ ಕೂಡ ದಾಖಲಿಸಿಕೊಂಡಿದೆ. ಡಿಡಬ್ಲ್ಯೂ–1 ತನ್ನ ಪಾಟೀ ಸವಾಲಿನಲ್ಲಿ ತಾನು ಯಾರೊಬ್ಬರ ಹಿತಾಸಕ್ತಿಯ ವಿರುದ್ಧ ದಾವಾ ಜಮೀನನ್ನು ಅನುಭೋಗಿಸುತ್ತಿಲ್ಲ ಮತ್ತು ತನ್ನ ಹಾಗೂ ವಾದಿಯ ನಡುವೆ ದಾವಾ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿರಲಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅಲ್ಲದೆ, ಆತನು ತನಗೆ 2000ದ ಇಸವಿಯ ಅವಧಿಯಲ್ಲಿ ಸರ್ವೆ ನಡೆದ ನಂತರ

ಮಾತ್ರವೇ ದಾವಾ ಜಮೀನಿನ ಬಗ್ಗೆ ತಿಳಿದು ಬಂದದ್ದು ಎಂಬುದನ್ನೂ ಕೂಡ ಒಪ್ಪಿಕೊಂಡಿದ್ದಾನೆ. ಇಂಥ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಪ್ರತಿವಾದಿಯು ದಾವಾ ಜಮೀನಿನ ಸ್ವಾಧೀನದಲ್ಲಿದ್ದು ಅನುಭೋಗಿಸುತ್ತಿದ್ದಾಗ್ಯೂ ಕೂಡ ಆತನು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ದಾವಾ ಸ್ವತ್ತಿನ ಮೇಲೆ ತನ್ನ ಸ್ವಾಮ್ಯವನ್ನು ಪಕ್ಕಾ ಮಾಡಿಕೊಂಡಿದ್ದನು ಎಂದು ಹೇಳಲಾಗದು. ಪ್ರತಿವಾದಿಯು ವಾದಿಗೆ ಮತ್ತು ಸ್ಥಳೀಯ ನಿವಾಸಿಗಳಿಗೆ ತಿಳಿದಿರುವಂತೆ 55 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ನಿರಂತರವಾಗಿ ದಾವಾ ಜಮೀನಿನ ಮೇಲೆ ತನ್ನ ಪ್ರತಿಕೂಲ ಸ್ವಾಧೀನವಿದ್ದು, ಅನುಭೋಗಿಸುತ್ತಿದ್ದೆನೆಂಬುದನ್ನು ರುಜುವಾತುಪಡಿಸಲು ವಿಫಲನಾಗಿದ್ದಾನೆಂಬ ನಿರ್ಣಯವನ್ನೂ ಕೂಡ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದೆ. ಸರ್ವೇಯರ್ ಸಿದ್ಧಪಡಿಸಿದ ನಿಶಾನೆ ಪಿ–1 ನಕ್ಷೆಯನ್ನಾಧರಿಸಿ ವಾದಿಯು ಪ್ರತಿವಾದಿಯಿಂದ 3 ಗುಂಟೆ ವಿಸ್ತೀರ್ಣದ ಜಮೀನಿನ ಸ್ವಾಧೀನವನ್ನು ಕೋರಿದ್ದಾನೆಂಬುದನ್ನೂ ಸಹ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದೆ. ಪ್ರತಿವಾದಿಯು ವಾದಿಯ ಮತ್ತು ಪ್ರತಿವಾದಿಯ ಹಾಗೂ ಇತರ ನೆರೆಹೊರೆಯವರ ಜಮೀನುಗಳನ್ನು ಸಂಬಂಧಪಟ್ಟ ಪಕ್ಷಕಾರರ ಸಮ್ಮುಖದಲ್ಲಿ ಸರ್ವೇಯರ್ ಅಳತೆ ಮಾಡಿದ್ದಾರೆಂಬುದನ್ನು ನಿರಾಕರಿಸಿದ್ದರೂ ಕೂಡ ವಾದ ಪತ್ರದ ಕಚ್ಚಾ ನಕ್ಷೆಯಲ್ಲಿ ತಿಳಿಸಿದಂತಹ ಒತ್ತುವರಿಯನ್ನು ನಿರ್ದಿಷ್ಟವಾಗಿ ನಿರಾಕರಿಸಿಲ್ಲ. ಒಪ್ಪಿಕೊಳ್ಳಲಾಗಿರುವಂತೆ, ವಾದಿಯು ಸರ್ವೇಯರ್ ಸಿದ್ಧಪಡಿಸಿದ ನಿಶಾನೆ ಪಿ–1/ 'ಬಿಎನ್‌ಡಿ' ಶೀಟ್ ಆಧಾರದ ಮೇಲೆ ವಾದ ಪತ್ರದ ಕಚ್ಚಾ ನಕ್ಷೆಯನ್ನು ಸಿದ್ಧಪಡಿಸಿದ್ದಾನೆ. ಪ್ರತಿವಾದಿಯು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ತಾನು ದಾವಾ ಸ್ವತ್ತಿನ ಒಡೆಯನೆಂಬ ಮಟ್ಟಿಗೆ ಎದುರು – ಕ್ಲೇಮಿನ ಮೂಲಕ ಘೋಷಣೆಯ ಪರಿಹಾರವನ್ನು ಕೋರಿದ್ದರೂ, ಆತನು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ದಾವಾ ಸ್ವತ್ತಿನ ಮೇಲಿನ ತನ್ನ ಸ್ವಾಮ್ಯವನ್ನು ತಾನು ಪಕ್ಕಾ ಮಾಡಿಕೊಂಡಿದ್ದೇನೆ ಎಂಬುದನ್ನು ಸಮರ್ಥಿಸಲು ವಿಫಲನಾಗಿದ್ದಾನೆ. ಆದ್ದರಿಂದ, ಕೋರಿರುವ ಘೋಷಣೆಯ ಪರಿಹಾರಕ್ಕೆ ಆತನು ಹಕ್ಕುಳ್ಳವನಲ್ಲ. ಹಾಗಾಗಿ, ಅಧಿವಿಚಾರಣಾ ನ್ಯಾಯಾಲಯುವು ಆದೇಶದ ದಿನಾಂಕದಿಂದ ಮೂರು ತಿಂಗಳುಗಳೊಳಗಾಗಿ ವಾದಪತ್ರದ ಕಚ್ಚಾ ನಕ್ಷೆಯಲ್ಲಿ ಕೆಂಪು ಶಾಯಿಯ ಮೂಲಕ

ತೋರಿಸಿದಂತಹ 3 ಗುಂಟೆ ವಿಸ್ತೀರ್ಣದ ದಾವಾ ಜಮೀನಿನ ಸ್ವಾಧೀನವನ್ನು ವಾದಿಗೆ ಹಸ್ತಾಂತರಿಸುವಂತೆ ಪ್ರತಿವಾದಿಗೆ ನಿರ್ದೇಶಿಸಿತು ಮತ್ತು ಎದುರು ಕ್ಲೇಮಿನ ರೂಪದಲ್ಲಿ ಪ್ರತಿವಾದಿಯು ಕೋರಿದ ಘೋಷಣೆಯ ಪರಿಹಾರ ಮತ್ತು ಖಾಯಂ ನಿರ್ಬಂಧಕಾಜ್ಞೆಯ ಪರಿಹಾರವನ್ನು ವಜಾಗೊಳಿಸಿತು.

19. ಪ್ರತಿವಾದಿಯು ತಾನು ದಾವಾ ಅನುಸೂಚಿ ಸ್ವತ್ತಿನ ಒಡೆಯನೆಂಬ ನಿರ್ದಿಷ್ಟ ಪ್ರತಿವಾದವನ್ನು ಇಟ್ಟುಕೊಂಡು ವಿವರವಾದ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದರೂ ಮತ್ತು ಖಾಯಂ ನಿರ್ಬಂಧಕಾಜ್ಞೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ VIIIರ ನಿಯಮ 6ಎ ಅಡಿಯಲ್ಲಿ ಎದುರು ಕ್ಲೇಮನ್ನು ಸಲ್ಲಿಸಿದ್ದರೂ ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಪ್ರತಿಕೂಲ ಸ್ವಾಧೀನದಲ್ಲಿ ದಾವಾ ಸ್ವತ್ತಿನ ಮೇಲಿನ ಅವನ ಸ್ವಾಮ್ಯವನ್ನು ಅವನು ರುಜುವಾತುಪಡಿಸಿಲ್ಲವೆಂದು ನಿರ್ಣಯಿಸಿ ಆತನ ಎದುರು ಕ್ಲೇಮನ್ನು ವಜಾಗೊಳಿಸಿತು. ಒಪ್ಪಿಕೊಳ್ಳಲಾಗಿರುವಂತೆ, ಪ್ರತಿವಾದಿಯು ಎದುರು ಕ್ಲೇಮು ವಜಾಗೊಂಡಿರುವುದರ ವಿರುದ್ಧ ಕೆಳ ಮೇಲ್ಮನವಿ ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ. ಕೇವಲ ವಾದಿಯು ದಾವಾ ಅನುಸೂಚಿ ಸ್ವತ್ತಿನ ಒಡೆಯನೆಂದು ಮತ್ತು ಅತನು ಆ ಜಮೀನಿನ ಸ್ವಾಧೀನಕ್ಕೆ ಹಕ್ಕುಳ್ಳವನಾಗಿದ್ದಾನೆಂದು ಘೋಷಿಸಿ ವಾದಿಯ ಪರವಾಗಿ ಡಿಕ್ರಿಯನ್ನು ನೀಡಿರುವುದರ ವಿರುದ್ಧ ಮಾತ್ರ ಪ್ರತಿವಾದಿಯು ಕೆಳ ಮೇಲ್ಮನವಿ ನ್ಯಾಯಾಲಯದ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದಾನೆ.

20. ಪಾಟೀ ಸವಾಲಿನಲ್ಲಿ ಪ್ರತಿವಾದಿ/ಡಿಡಬ್ಲ್ಯೂ–1 ಒಪ್ಪಿಕೊಂಡಿರುವಂತೆ, 2000ದ ಇಸವಿಯಲ್ಲಿ ಸರ್ವೆಯನ್ನು ಮಾಡಲಾಗಿದೆ ಎಂಬುದು ನಿರ್ವಿವಾದವಾಗಿದೆ. ಆದರೆ, ಆತನು, ವಾದಿಯ ಜಮೀನಿನಲ್ಲಿ 3 ಗುಂಟೆಯನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿದ್ದಾನೆಂಬುದನ್ನು ತೋರಿಸಿ ಸರ್ವೆಯರ್ ಮಾಡಿದ ಸರ್ವೆಯನ್ನು ಪ್ರಶ್ನಿಸಿಲ್ಲ. ಆದ್ದರಿಂದ, ಸರ್ವೇಯರ್ ಸಿದ್ಧಪಡಿಸಿದ ನಿಶಾನೆ ಪಿ.1/ಬಿಎನ್‌ಡಿ ಶೀಟ್ ಪ್ರತಿವಾದಿಯ ಮೇಲೆ ಬದ್ಧವಾಗಿರುತ್ತದೆ.

21. ಕೆಳ ಮೇಲ್ಮನವಿ ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಮರು ಮೌಲ್ಯಮಾಪನ ಮಾಡಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದ ಸತ್ಯ ಸಂಗತಿಗಳ ನಿರ್ಣಯಕ್ಕೆ ಒಮ್ಮತವನ್ನು ಸೂಚಿಸಿ, ಡಿಡಬ್ಲ್ಯೂ–1 ಆಗಿ ವಿಚಾರಣೆಗೊಳಗಾದ ಪ್ರತಿವಾದಿಯು ಪಾಟೀ ಸವಾಲಿನಲ್ಲಿ ಪ್ರತಿವಾದದ ಅಂಶಗಳನ್ನೇ ಪುನರುಚ್ಚರಿಸಿದ್ದಾನೆಂಬ ನಿರ್ಣಯವನ್ನು ದಾಖಲಿಸಿದೆ. ಆತನು ಸ್ಪಷ್ಟವಾಗಿ ಒಪ್ಪಿಕೊಂಡಿರುವುದು ಈ ಮುಂದಿನಂತಿದೆ:

> "ನಾವು ವಾದಿಯ ಆಸ್ತಿಯಲ್ಲಿ 00–03 ಗುಂಟೆ ಅತಿಕ್ರಮಣ ಮಾಡಿರುತ್ತೇವೆ ಅಂತ ಮೋಜಿಣಿ ಆದ ಮೇಲೆ ನಮ್ಮ ಮಾಹಿತಿಗೆ ಬಂದಿರುತ್ತದೆ ಅಂದರೆ ಸರಿ. ಸದರೀ ಮೋಜಣಿ ವಿರುದ್ಧ ನಾವು ಜಮಖಂಡಿ ಅಥವಾ ಬೇರೆ ಯಾವುದೇ ಇಲಾಖೆಯಲ್ಲಾಗಲೀ ಮೇಲ್ಮನವಿ ಮಾಡಿಲ್ಲ".

22. ಪಾಟೀ ಸವಾಲಿನಲ್ಲಿ ಆತನು ಮುಂದುವರಿದು ಈ ಮುಂದಿನಂತೆ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾನೆ:

> "ನಾನು ಈ ದಾವೆಯಲ್ಲಿ ತಕ್ರಾರ ಸಲ್ಲಿಸಲು ವಕೀಲರಿಗೆ ಕೊಟ್ಟ ಮಾಹಿತಿ ಸರಿ ಇರುತ್ತದೆ. ನಾವು ನಮ್ಮ ಜಮೀನಿನಲ್ಲಿ ಸುಮಾರು 50–60 ವರ್ಷಗಳಿಂದ ಕಬ್ಜೆಯಲ್ಲಿರುತ್ತಿದ್ದೇವೆ. ಅಂದರೆ ಉತಾರದಲ್ಲಿ ನಮೂದಿಸಿದ ಕ್ಷೇತ್ರದಲ್ಲಿ ಇರುತ್ತಿದ್ದೇವೆ. ನಾನು ತಕರಾರಿನಲ್ಲಿ ವಾದಿಯ ಜಮೀನದಲ್ಲಿ ನಾನು ಬೇಕಾಯ್ದೇಶಿರ ನಾತಿಯಿಂದ ಸ್ವಾಧೀನದಲ್ಲಿದ್ದೇನೆ ಅಂತ ಹೇಳಿ ಬರೆಸಿಲ್ಲ. ಅದೇ ಪ್ರಕಾರ ನಾನು ವಾದಿ ಕರಿಶಾಯಪ್ಪನವರ ದಾವಾ ಜಮೀನಿಗೆ ಮಾಲೀಕನಾಗಿದ್ದೇನೆ ಅಂತ ಹೇಳಿ ಬರೆಸಿಲ್ಲ."

23. ನಂತರ, ಕೆಳ ಮೇಲ್ಮನವಿ ನ್ಯಾಯಾಲಯವು, ಪ್ರತಿವಾದಿಯು ಮಾಡಿರುವ ಸದರಿ ಸ್ಪಷ್ಟವಾದ ಒಪ್ಪಿಗೆಯ ಹಿನ್ನೆಲೆಯಲ್ಲಿ, ವಾದಿಗೆ ತಿಳಿದಿರುವಂತೆ ದಾವಾ ಸ್ವತ್ತನ್ನು ಪ್ರತಿವಾದಿಯು ಮತ್ತು ಆತನ ಪೂರ್ವಿಕರು ಸ್ವಾಮ್ಯವನ್ನಿಟ್ಟುಕೊಂಡು ಮುಕ್ತವಾಗಿ, ಅಬಾಧಿತವಾಗಿ ವಾದಿ ಮತ್ತು ಆತನ ಪೂರ್ವಿಕರಿಗೆ ಸೂಕ್ತ ತಿಳುವಳಿಕೆ ಇದ್ದಂತೆಯೇ ಅನುಭೋಗಿಸುತ್ತಿದ್ದು, ಪ್ರತಿಕೂಲ ಸ್ವಾಧೀನದ ಮೂಲತತ್ವದ ಬಲದಿಂದ ದಾವಾ ಸ್ವತ್ತಿನ ಸ್ವಾಮ್ಯವನ್ನು ಪಕ್ಕಾ ಮಾಡಿಕೊಂಡಿದ್ದರು ಎಂದು ಪ್ರತಿವಾದಿಯು ಲಿಖಿತ ಹೇಳಿಕೆಯಲ್ಲಿ ಮಾಡಿರುವ ಪ್ರತಿಪಾದನೆಗಳಿಗೆ ಯಾವ ಬಲವೂ ಇರುವುದಿಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆಂಬ ನಿರ್ಣಯವನ್ನು ದಾಖಲಿಸಿದೆ. ವಾದಿಗೆ ಸೇರಿದ ದಾವಾ ಜಮೀನಿನ ಒತ್ತುವರಿಯ ಬಗ್ಗೆ ತನಗೇನೂ ಗೊತ್ತಿರಲಿಲ್ಲ, ಅಳತೆ ಮಾಡಿದ ನಂತರ ಮಾತ್ರವೇ ತನಗೆ ಗೊತ್ತಾದದ್ದು ಎಂದು ಪ್ರತಿವಾದಿಯು ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾನೆ. ವಿಷಯ ಹೀಗಿರುವಾಗ, ಆ ನಂತರ, ವಾದಿಯು ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಗೆ ನೀಡಿದ್ದಾನೆ. ಹಾಗಾಗಿ ಸದರಿ ಒಪ್ಪಿಗೆಗಳು ವಾದಿಯ ದಾವೆಯನ್ನು ವಜಾಗೊಳಿಸುವುದಕ್ಕೆ ಮತ್ತು ಪ್ರತಿವಾದಿಯು ಮಾಡಿರುವ ಎದುರು ಕ್ಲೇಮನ್ನು ಡಿಕ್ರಿ ಮಾಡುವುದಕ್ಕೆ ಸಾಕಾಗುತ್ತವೆ ಎಂಬ ಮೇಲ್ಮನವಿದಾರನ/ಪ್ರತಿವಾದಿಯ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಪ್ರತಿವಾದಿಯು ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವ ಸಂಗತಿಯು ವಾದಿಯ ದಾವೆಯನ್ನು ಡಿಕ್ರಿಗೊಳಿಸುವುದಕ್ಕೆ ಸಾಕಾಗುತ್ತದೆ. ಪ್ರತಿವಾದಿಯು ಒಪ್ಪಿಕೊಂಡಿರುವಂತೆ ಸರ್ವೆ ಪ್ರಾಧಿಕಾರಿಗಳು ನಡೆಸಿದ ಅಳತೆಯ ವಿರುದ್ಧ ಆತನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ. ಸರ್ವೆ ಪ್ರಾಧಿಕಾರಿಗಳ ಅಳತೆಯಿಂದ ಪ್ರತಿವಾದಿಯು ಬಾಧಿತನಾಗಿದ್ದೇ ಆದರೆ ಆತನು ಪಿ.ಟಿ. ಶೀಟ್‌ನ ಸರಿತನವನ್ನು ಪ್ರಶ್ನಿಸಿ ಸಂಬಂಧಪಟ್ಟ ಪ್ರಾಧಿಕಾರಗಳ ಮುಂದೆ ಮೇಲ್ಮನವಿಯನ್ನು ಸಲ್ಲಿಸಬಹುದಿತ್ತು. ಆದರೆ, ಹಾಗೆ ಮಾಡಿಲ್ಲ. ಆದ್ದರಿಂದ ಪ್ರತಿವಾದಿಯ ವಾದವನ್ನು ಒಪ್ಪಲಾಗದು. ಡಿಡಬ್ಲ್ಯೂ–2 ಮತ್ತು 3 ಸಹ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ನುಡಿದಿದ್ದಾರೆ. ಅವರು ತಮ್ಮ ಪಾಟೀ ಸವಾಲಿನಲ್ಲಿ ಪ್ರತಿವಾದಿಯ ಪ್ರತಿಕೂಲ ಸ್ವಾಧೀನ ಮತ್ತು ಪ್ರತಿಕೂಲ ಸ್ವಾಮ್ಯದ ಬಗ್ಗೆ ತಮಗೇನೂ ಗೊತ್ತಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮುಂದೆ ವಿಷಯದ

ಈ ಹಿನ್ನೆಲೆಯಲ್ಲಿ ಡಿಡಬ್ಲ್ಯೂ–2 ಮತ್ತು 3ರ ಸಾಕ್ಷ್ಯವು ಕೂಡ ಪ್ರತಿವಾದಿಗೆ ನೆರವಾಗುವುದಿಲ್ಲ. ಇದೆಲ್ಲದರ ಪರಿಣಾಮವಾಗಿ, ಕೆಳ ಮೇಲ್ಮನವಿ ನ್ಯಾಯಾಲಯವು ಮೇಲ್ಮನವಿಯನ್ನು ವಜಾಗೊಳಿಸಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಸ್ಥಿರೀಕರಿಸಿದೆ.

24. ಆರ್.ಎಸ್. ಸಂಖ್ಯೆ 98/1ರ 9 ಎಕರೆ 37 ಗುಂಟೆ ಅಳತೆಯ ಜಮೀನು ವಾದಿಗೆ ಸೇರಿದೆ ಮತ್ತು ಪ್ರತಿವಾದಿಯು ಸರ್ವೆ ನಂ.97/2ರ 9 ಎಕರೆ 6 ಗುಂಟೆ ಅಳತೆಯ ಪಕ್ಕದ ಜಮೀನಿನ ಒಡೆಯನಾಗಿದ್ದಾನೆ ಎಂಬ ಒಪ್ಪಿತ ಸಂಗತಿಗಳ ಹಿನ್ನೆಲೆಯಲ್ಲಿ, ವಿವಾದವು ವಾದಿಗೆ ಸೇರಿದ 3 ಗುಂಟೆ ಜಮೀನಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ನಿಶಾನೆ ಪಿ–1ರ ಪ್ರಕಾರ, 01.08.2000ದಂದು ಸರ್ವೇಯರನು ನಡೆಸಿದ ಸರ್ವೆಯು ದಾವಾ ಅನುಸೂಚಿ ಸ್ವತ್ತನ್ನು ಎಂದರೆ, ವಾದಿಗೆ ಸೇರಿದ 3 ಗುಂಟೆ ಜಮೀನನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿರುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಕಂದಾಯ ಪ್ರಾಧಿಕಾರಿಯು ಉದ್ದೇಶಿತ ಕಾರ್ಯಪ್ರಕ್ರಿಯೆಯನ್ನು ಅನುಸರಿಸಿದ ನಂತರ ದಾಖಲಿಸಿದ ಸದರಿ ನಿರ್ಣಯವನ್ನು ಪ್ರತಿವಾದಿಯು ಯಾವುದೇ ಮೇಲ್ಮನವಿ ನ್ಯಾಯಾಲಯದ ಮುಂದೆ ಪ್ರಶ್ನಿಸಿಲ್ಲ. ಆದ್ದರಿಂದ, ಸರ್ವೇಯರನು ಅಧಿಕೃತವಾದ ಕಾರ್ಯ ನಿರ್ವಹಣೆಯ ಅವಧಿಯಲ್ಲಿ ಮಾಡಿದ ಸದರಿ ನಿಶಾನೆ ಪಿ–1, ಭಾರತೀಯ ಸಾಕ್ಷ್ಯ ಅಧಿನಿಯಮದ 114ನೇ ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿ ಸಿಂಧುವಾಗಿದೆ.

25. ಅಲ್ಲದೆ, ಡಿಡಬ್ಲ್ಯೂ–1/ಪ್ರತಿವಾದಿಯು ಪಾಟೀ ಸವಾಲಿನಲ್ಲಿ ವಾದಿಯ ಜಮೀನಿನಲ್ಲಿ 3 ಗುಂಟೆ ಅಳತೆಯ ಜಮೀನನ್ನು ತಾನು ಒತ್ತುವರಿ ಮಾಡಿಕೊಂಡಿದ್ದೇನೆಂಬ ಬಗ್ಗೆ ತನಗೆ 01.08.2000 ದಂದು ತಿಳಿದುಬಂತು ಎಂದು ಒಪ್ಪಿಕೊಂಡಿದ್ದಾನೆಂಬುದು ಮತ್ತು ವಾದಿಯು ಆರು ವರ್ಷಗಳೊಳಗೆ 22.07.2006ರಂದು ಸ್ವಾಧೀನಕ್ಕಾಗಿ ದಾವೆಯನ್ನು ಹೂಡಿದ್ದಾನೆಂಬುದೂ ಸಹ ನಿರ್ವಿವಾದವಾಗಿದೆ. ಆದ್ದರಿಂದ, ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯು ಮಾಡಿದ ಕ್ಲೇಮನ್ನು ಒಪ್ಪಿಕೊಳ್ಳಲಾಗದು. ಪ್ರತಿವಾದಿಯು ತನ್ನ

ಲಿಖಿತ ಹೇಳಿಕೆಯೊಡನೆ ಎದುರು ಕ್ಲೇಮನ್ನು ಸಲ್ಲಿಸಿ, ತಾನು ಪ್ರತಿಕೂಲ ಸ್ವಾಧೀನದ ರೂಪದಲ್ಲಿ ದಾವಾ ಅನುಸೂಚಿ ಸ್ವತ್ತಿನ ಒಡೆಯನಾಗಿದ್ದೇನೆ ಎಂದು ವಾದಿಸಿದ್ದಾನೆಂಬುದೂ ಕೂಡ ನಿರ್ವಿವಾದವಾಗಿದೆ.

26. ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ನಿರ್ದಿಷ್ಟವಾಗಿ ವಾದಿಯ ವಿರುದ್ಧ ಪ್ರತಿವಾದಿಯು ಆತನ ಪ್ರತಿಕೂಲ ಸ್ವಾಧೀನವನ್ನು ರುಜುವಾತುಪಡಿಸಲು ವಿಫಲನಾಗಿದ್ದಾನೆ ಎಂಬ ನಿರ್ಣಯವನ್ನು ದಾಖಲಿಸಿದೆ ಮತ್ತು ಆತನು ಒಡೆತನದ ಘೋಷಣೆಯ ಪರಿಹಾರಕ್ಕಾಗಿ ಮತ್ತು ಖಾಯಂ ನಿರ್ಬಂಧಕಾಜ್ಞೆಯ ಪರಿಹಾರಕ್ಕಾಗಿ ಸಲ್ಲಿಸಿದ್ದ ಎದುರು ಕ್ಲೇಮನ್ನು ವಜಾಗೊಳಿಸಿದೆ. ಒಪ್ಪಿಕೊಳ್ಳಲಾಗಿರುವಂತೆ, ಘೋಷಣೆಗಾಗಿನ ಮತ್ತು ಖಾಯಂ ನಿರ್ಬಂಧಕಾಜ್ಞೆಗಾಗಿನ ಆತನ ಕ್ಲೇಮನ್ನು ನಿರಾಕರಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಸದರಿ ಡಿಕ್ರಿಯನ್ನೂ ಕೂಡ ಪ್ರಶ್ನಿಸಿಲ್ಲ. ಪ್ರತಿವಾದಿಯು ದಾವಾ ಜಮೀನಿನ ಒಡೆಯನೆಂದು ಘೋಷಿಸುವ ಪರಿಹಾರದ ಮಟ್ಟಿಗೆ ಮಾತ್ರ ಪ್ರತಿವಾದಿಯು ಸಲ್ಲಿಸಿರುವ ಮೇಲ್ಮನವಿಯನ್ನು ಕೆಳ ಮೇಲ್ಮನವಿ ನ್ಯಾಯಾಲಯವು ಪರಿಗಣಿಸಿದ್ದು, ಪ್ರತಿವಾದಿಯು ನೀಡಿದ ನಿರ್ದಿಷ್ಟ ಒಪ್ಪಿಗೆಗಳ ಹಿನ್ನೆಲೆಯಲ್ಲಿ ಕೆಳ ಮೇಲ್ಮನವಿ ನ್ಯಾಯಾಲಯವು ಮೇಲ್ಮನವಿಯನ್ನು ವಜಾಗೊಳಿಸಿದೆ.

27. ***ಪಿ.ಟಿ. ಮುನಿಚಿಕ್ಕಣ್ಣ ರೆಡ್ಡಿ -ವಿರುದ್ಧ- ರೇವಮ್ಮ ಮತ್ತು ಇತರರು*** [1], ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರತಿಕೂಲ ಸ್ವಾಧೀನದ ಕಾನೂನನ್ನು ಪರ್ಯಾಲೋಚಿಸುವಾಗ. ಪ್ರತಿಕೂಲ ಸ್ವಾಧೀನವು – ಮೊದಲಿಗೆ ತನ್ನ ಸ್ವಾಮ್ಯ ಮತ್ತು ಸ್ವಾಧೀನವನ್ನು ರುಜುವಾತು ಪಡಿಸುವ ರುಜುವಾತಿನ ಹೊಣೆಗಾರಿಕೆಯು ಭೂ ಒಡೆಯನ ಮೇಲಿರುತ್ತದೆ–ಆನಂತರ ಆ ಹೊಣೆಗಾರಿಕೆಯು ಪ್ರತಿಕೂಲ ಸ್ವಾಧೀನದ ಮೂಲಕ ಪಡೆದ ಸ್ವಾಮ್ಯವನ್ನು ರುಜುವಾತುಪಡಿಸುವ ಮತ್ತೊಬ್ಬ ಪಕ್ಷಕಾರನಿಗೆ ವರ್ಗಾವಣೆಯಾಗುತ್ತದೆ.

1. (2007) 6 ಎಸ್‌ಸಿಸಿ 59

28. ಪ್ರಸ್ತುತ ಮೊಕದ್ದಮೆಯಲ್ಲಿ, ದಾವಾ ಸ್ವತ್ತಿನ ಒಡೆಯನೆಂದು ಕ್ಲೇಮು ಮಾಡಿರುವ ವಾದಿಯು ಆರಂಭಿಕ ಹೊಣೆಯನ್ನು ರುಜುವಾತುಪಡಿಸಿದ್ದಾನೆ ಮತ್ತು ಆ ನಂತರ, ಪ್ರತಿವಾದಿಯ ಮೇಲೆ ಪ್ರತಿಕೂಲ ಸ್ವಾಧೀನದ ಮೂಲಕ ಪಡೆದ ಆತನ ಸ್ವಾಮ್ಯವನ್ನು ರುಜುವಾತುಪಡಿಸುವುದಕ್ಕೆ ಹೊಣೆಯು ವರ್ಗಾವಣೆಯಾಗಿದೆ. ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರವನ್ನು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಯು ಪ್ರತಿಕೂಲ ಸ್ವಾಧೀನದಿಂದ ಪಡೆದ ತನ್ನ ಸ್ವಾಮ್ಯವನ್ನು ರುಜುವಾತುಪಡಿಸಿಲ್ಲವೆಂದು ನಿರ್ಣಯಿಸಿ ಪ್ರತಿವಾದಿಯು ಸಲ್ಲಿಸಿದ್ದ ಎದುರು ಕ್ಲೇಮನ್ನು ವಜಾಗೊಳಿಸಿದೆ. ಒಪ್ಪಿಕೊಳ್ಳಲಾಗಿರುವಂತೆ, ಪ್ರತಿವಾದಿಯು ತನ್ನ ಎದುರುಕ್ಲೇಮು ವಜಾಗೊಂಡಿರುವ ಬಗ್ಗೆಯೂ ಕೂಡ ಕೆಳ ಮೇಲ್ಮನವಿ ನ್ಯಾಯಾಲಯದ ಮುಂದೆ ಪ್ರಶ್ನಿಸಿಲ್ಲ. ಅಧೀನ ನ್ಯಾಯಾಲಯಗಳೆರಡೂ ಸಹ ಒಮ್ಮತವಾಗಿ ವಾದಿಯು 3 ಗುಂಟೆ ಜಮೀನಿನ ಒಡೆಯನಾಗಿದ್ದು, ಆತನು ಅದರ ಸ್ವಾಧೀನಕ್ಕೆ ಹಕ್ಕುಳ್ಳವನಾಗಿದ್ದಾನೆಂದು ನಿರ್ಣಯಿಸಿವೆ, ತದನುಸಾರವಾಗಿ, ದಾವೆಯು ಡಿಕ್ರಿಯಾಗಿದೆ.

29. ***ಹರಿಯಾಣ ರಾಜ್ಯ ಸರ್ಕಾರ –ವಿರುದ್ಧ– ಮುಖೇಶ್ ಕುಮಾರ್ ಮತ್ತು ಇತರರು*** [2], ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕಾಲ ಪರಿಮಿತಿ ಅಧಿನಿಯಮದ 64 ಮತ್ತು 65ನೇ ಅನುಚ್ಛೇದಗಳ ಉಪಬಂಧಗಳನ್ನು ಪರ್ಯಾಲೋಚಿಸುವಾಗ, ಪ್ರತಿಕೂಲ ಸ್ವಾಧೀನ ರೂಪದಲ್ಲಿ ಸರ್ಕಾರದ ಪ್ರಾಧಿಕಾರಗಳು ಕಾನೂನುಬಾಹಿರ ಭೂ ಆರ್ಜನೆಯನ್ನು ಮಾಡಿರುತ್ತವೆಂದು – ಅಂಥ ಪ್ರತಿಕೂಲ ಸ್ವಾಧೀನದ "ಕೆಟ್ಟ ಸಂಪ್ರದಾಯ" ವನ್ನು ತೊಡೆದು ಹಾಕಬೇಕೆಂದು ತಿಳಿಸಿ – ಪ್ರತಿಕೂಲ ಸ್ವಾಧೀನ ಕಾನೂನಿನಲ್ಲಿ ಜರೂರಾದ ಸೂಕ್ತ ಬದಲಾವಣೆಯನ್ನು ಶಿಫಾರಸು ಮಾಡಿದೆ ಮತ್ತು ಪ್ರತಿಕೂಲ ಸ್ವಾಧೀನದ ಕಾನೂನನ್ನು ಭಾರತವು ಬ್ರಿಟಿಷರಿಂದ ಪಡೆದದ್ದೆಂದು ಅಭಿಪ್ರಾಯಪಟ್ಟಿದೆ. ಪ್ರತಿಕೂಲ ಸ್ವಾಧೀನದ ಕಾನೂನನ್ನು ರದ್ದು ಮಾಡುವತ್ತ ಅಥವಾ ಕೊನೇ ಪಕ್ಷ ವ್ಯಾಪಕವಾದ ಸಾರ್ವಜನಿಕ ಹಿತಾಸಕ್ತಿಯಿಂದ ಆ ಕಾನೂನಿಗೆ ತಿದ್ದುಪಡಿ ತರುವತ್ತ ಮತ್ತು ಮಹತ್ವದ ಬದಲಾವಣೆಗಳನ್ನು

2. (2011) 10 ಎಸ್‌ಸಿಸಿ 404

ಮಾಡುವತ್ತ ಸಂಸತ್ತು ಆಲೋಚಿಸಬೇಕು, ಅಲ್ಲದೆ ಪ್ರತಿಕೂಲ ಸ್ವಾಧೀನವು ಸಮಾಜಕ್ಕೆ ವ್ಯಾಪಕವಾಗಿ ತಪ್ಪು ಸಂದೇಶವನ್ನು ನೀಡುತ್ತದೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಅಂಥ ಒಂದು ಬದಲಾವಣೆಯು, ಪ್ರಾಮಾಣಿಕ ಮಾರ್ಗಗಳ ಮುಖಾಂತರ ಜಮೀನಿನ ಮೇಲೆ ಸಂಬಂಧ ಸ್ಥಾಪಿಸಿಕೊಂಡವರು ಮಾತ್ರ ಕಾನೂನು ಪರಿಹಾರಕ್ಕೆ ಹಕ್ಕುಳ್ಳವರಾಗುತ್ತಾರೆ ಎಂಬುದನ್ನು ಖಾತ್ರಿಪಡಿಸುತ್ತದೆ.

30. ಪ್ರಸ್ತುತ ಮೊಕದ್ದಮೆಯಲ್ಲಿ, ಒಪ್ಪಿಕೊಳ್ಳಲಾಗಿರುವಂತೆ, ಪ್ರತಿವಾದಿಯು ವಾದಿಯ ವಿರುದ್ಧದ ತನ್ನ ಪ್ರತಿಕೂಲ ಸ್ವಾಧೀನವನ್ನು ರುಜುವಾತುಪಡಿಸುವುದಕ್ಕೆ ಅಂಥ ಯಾವುದೇ ಪ್ರಯತ್ನವನ್ನೂ ಮಾಡಿಲ್ಲ ಮತ್ತು ವಾಸ್ತವವಾಗಿ, ಪ್ರತಿಕೂಲ ಸ್ವಾಧೀನದ ರೂಪದಲ್ಲಿ ಪಡೆದ ತನ್ನ ಸ್ವಾಮ್ಯಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಪ್ರತಿವಾದಿಯು ತನ್ನ ಎದುರು ಕ್ಲೇಮನ್ನು ಕಳೆದುಕೊಂಡಿದ್ದು, ಅದನ್ನು ಪ್ರಶ್ನಿಸುವುದಕ್ಕೂ ಹೋಗಿಲ್ಲ.

31. ವಾದಿಯು 3 ಗುಂಟೆ ದಾವಾ ಅನುಸೂಚಿ ಸ್ವತ್ತಿನ ಒಡೆಯನಾಗಿದ್ದಾನೆಂದು ಮತ್ತು ಪ್ರತಿವಾದಿಯು ತನ್ನ ಪ್ರತಿಕೂಲ ಸ್ವಾಧೀನವನ್ನು ರುಜುವಾತುಪಡಿಸಲು ವಿಫಲನಾಗಿದ್ದಾನೆಂದು ಎರಡೂ ಅಧೀನ ನ್ಯಾಯಾಲಯಗಳು ಒಮ್ಮತದಿಂದ ನಿರ್ಣಯಿಸಿದೆ. ಆದ್ದರಿಂದ, ವಾದಿಯು ಸ್ವಾಧೀನಕ್ಕೆ ಹಕ್ಕುಳ್ಳವನಾಗಿದ್ದಾನೆ ಮತ್ತು ಅದಕ್ಕನುಸಾರವಾಗಿ ದಾವೆಯು ಡಿಕ್ರಿಯಾಗಿದೆ ಹಾಗೂ ಅದು ದಾಖಲೆಯಲ್ಲಿರುವ ಸಮರ್ಥನೀಯವಾದ, ಕಾನೂನಾತ್ಮಕ ಸಾಕ್ಷ್ಯದ ಮೇಲೆ ಆಧಾರಿತವಾಗಿದೆ. ಅಧೀನ ನ್ಯಾಯಾಲಯಗಳು ಸಂಪೂರ್ಣ ಮೌಖಿಕ ಮತ್ತು ದಾಖಲೆಯಲ್ಲಿರುವ ದಸ್ತಾವೇಜೀಯ ಸಾಕ್ಷ್ಯವನ್ನು ಪರಿಶೋಧಿಸಿ, ಸತ್ಯ ಸಂಗತಿಯ ನಿರ್ಣಯಗಳನ್ನು ದಾಖಲಿಸಿದ್ದು, ಅದರಲ್ಲಿ ಈ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಪ್ರಸ್ತುತ ಮೇಲ್ಮನವಿಯಲ್ಲಿ ಮಹತ್ವದ ಯಾವುದೇ ಕಾನೂನಿನ ಪ್ರಶ್ನೆಯೂ ಒಳಗೊಂಡಿಲ್ಲ. ಮೇಲ್ಮನವಿಯನ್ನು ಅಂಗೀಕಾರದ ಹಂತದಲ್ಲಿಯೇ ವಜಾಗೊಳಿಸಲಾಗಿದೆ.

---